(ಅನುಬಂಧ–5)

ಊ) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಜಲ ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಉತ್ಪಾದನೆ, ಶೇಖರಣೆ, ಸಾಗಾಣಿಕೆ, ಪೂರೈಕೆ ಅಥವಾ ವಿತರಣೆಗೆ ಸಂಬಂಧಿಸಿದಂತೆ, ಹಾಗೂ ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಗಿಸುವುದಕ್ಕಾಗಿ ಇರುವ ಸಾರಿಗೆ ಸೇವೆಗೆ ಸಂಬಂಧಿಸಿದಂತೆ ಮತ್ತು ರಾಜ್ಯ ವಿಧಾನ ಮಂಡಲವು ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿರುವಂತಹ ಯಾವುದೇ ಇತರ ಸೇವೆ ಅಥವಾ ಉದ್ಯೋಗ ಅಥವಾ ಅದರ ವರ್ಗಕ್ಕೆ ಸಂಬಂಧಿಸಿದಂತೆ ಕೆಲವು ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡುವುದನ್ನು ನಿರಾಕರಿಸುವುದನ್ನು ನಿಷೇಧಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಅಧ್ಯಕ್ಷರು : ಯಾರಾದರೂ ಚರ್ಚೆಯಲ್ಲಿ ಭಾಗವಹಿಸುತ್ತೀರಾ?

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಮಂಡಿಸಿದ್ದಾರೆ. ಇದೊಂದು ಪ್ರಜಾಪ್ರಭುತ್ವ ರಾಷ್ಟ್ರ ಎಂಬುದನ್ನು ನಾವು ತಿಳಿದಿರಬೇಕಾಗುತ್ತದೆ. ಇಲ್ಲಿ ತಂದಿರತಕ್ಕಂತಹ ಬಿಲ್‌ನಲ್ಲಿ ಜಲ ವಿದ್ಯುಚ್ಛಕ್ತಿ, ಶೇಖರಣೆ, ಸಾಗಾಣಿಕೆ, ಪೂರೈಕೆ ಅಥವಾ ವಿತರಣೆ, ಅಂದರೆ ಟ್ರಾನ್ಸ್‌ಪೋರ್ಟೇಷನ್, ಜಲ ಮಂಡಳಿಗಳು, ವಿದ್ಯುಚ್ಛಕ್ತಿ ವಿಭಾಗದಲ್ಲಿ ಉತ್ಪಾದನೆ, ಪ್ರೊಡಕ್ಷನ್ ಎಂದರೆ ಯಾವುದೇ ಪ್ರೊಡಕ್ಷನ್ ಆಗಬಹುದು, ಕಾರ್ಖಾನೆ ಆಗಬಹುದು, ಕೃಷಿ ಆಗಬಹುದು, ಯಾವುದಾದರೂ ಆಗಬಹುದು. ಶೇಖರಣೆ ಸ್ಟೋರ್ ಮಾಡತಕ್ಕಂಥದ್ದು, ಸಾಗಾಣಿಕೆ, ಟ್ರಾನ್ಸ್‌ಪೋರ್ಟೇಷನ್, ಪೂರೈಕೆ ಸಪ್ಲೈ, ಅಥವಾ ವಿತರಣೆಗೆ ಡಿಸ್ಟ್ರಿಬ್ಯೂಷನ್‌ಗೆ ಸಂಬಂಧಪಟ್ಟಂತೆ ಈ ವಿಭಾಗಗಳಲ್ಲಿ ಕೆಲಸ ಮಾಡತಕ್ಕಂತಹ ಜನರಿಗೆ ನಿಷೇಧ ಮಾಡುವಂಥದ್ದು ಇದೆ, ಇವರು ಏನಾದರೂ ತಮ್ಮ ಪ್ರಜಾಪ್ರಭುತ್ವದ ಹಕ್ಕುಗಳಿಗೋಸ್ಕರ ಹೋರಾಟ ಮಾಡುವುದನ್ನು, ಅವರ ಬೇಡಿಕೆಗಳನ್ನು ಒತ್ತಾಯ ಮಾಡಿ ಮುಷ್ಕರ ಹೂಡುವುದನ್ನು ನಿಷೇಧ ಮಾಡುವ

ಉದ್ದೇಶದಿಂದ ಈ ಬಿಲ್ಲನ್ನು ಅಗತ್ಯ ಸೇವೆ ಎಂದು ಹೇಳುತ್ತಿದ್ದಾರೆ. ಈ ದೇಶದಲ್ಲಿ ಎಲ್ಲವೂ ಅಗತ್ಯ ಸೇವೆಯೇ. ಅನಗತ್ಯವಾದಂತಹ ಸೇವೆಗಳು ಯಾವುದಾದರೂ ಇದೆಯಾ? ಸರ್ಕಾರ ಹೇಳಬೇಕು. ಈ ದೇಶದಲ್ಲಿ ಯಾವುದಾದರೂ ಅನಗತ್ಯವಾದ ಸೇವೆಗಳು ಇದೆಯಾ ಎಂಬುದನ್ನು ಸರ್ಕಾರ ಹೇಳಬೇಕು. ಎಲ್ಲವೂ ಅಗತ್ಯ ಸೇವೆಗಳೇ. ಹಾಗಾದರೆ ಎಲ್ಲವನ್ನೂ ನಿಷೇಧ ಮಾಡಿ ಬಿಡಿ. ಈ ದೇಶದಲ್ಲಿ ಪ್ರಜಾಪ್ರಭುತ್ವದ ಅವಶ್ಯಕತೆ ಇಲ್ಲ. ಪ್ರಜಾಪ್ರಭುತ್ವದ ಸಂವಿಧಾನ ಒಂದು ಇದೆ, ಸಂವಿಧಾನ ಸಾಮಾನ್ಯ ಜನರಿಗೆ ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ, ಮುಷ್ಕರ ಹೂಡತಕ್ಕಂತಹ ಹಕ್ಕನ್ನು ಕೊಟ್ಟಿದೆ, ತಮ್ಮ ಬೇಡಿಕೆಗಳಿಗೋಸ್ಕರ ಸಭೆ ಸಂಘಟನೆಗಳನ್ನು ಮಾಡಿಕೊಳ್ಳತಕ್ಕಂತಹ ಹಕ್ಕು ಕೊಟ್ಟಿದೆ, ಸಂವಿಧಾನದ ಪರಿಚ್ಛೇದ 13 ರಿಂದ 32ರವರೆಗೆ ಮೂಲಭೂತ ಹಕ್ಕುಗಳನ್ನು ಸಂವಿಧಾನದಲ್ಲಿ ಹೇಳಿದೆ. ಆ ಮೂಲಭೂತ ಹಕ್ಕುಗಳಲ್ಲಿ ಒಂದು ಭಾಗ ಇದು. ತಮ್ಮ ಬೇಡಿಕೆಗಳಿಗೋಸ್ಕರ ಮುಷ್ಕರ ಹೂಡತಕ್ಕಂಥದ್ದು, ಹೋರಾಟ ಮಾಡತಕ್ಕಂಥದ್ದು ಒಂದು ಭಾಗ ಇದು. ಅದನ್ನು ಅಗತ್ಯ ಸೇವೆಗಳ ಹೆಸರಿನಲ್ಲಿ ಉತ್ಪಾದನೆ ಕೂಡ ಅಗತ್ಯ ಸೇವೆ. ಹೌದು; ಉತ್ಪಾದನೆ ಇಲ್ಲದೆ ನಾವು ಯಾರೂ ಬದುಕುವುದಕ್ಕಾಗುವುದಿಲ್ಲ. ನಿಜ ಅಗತ್ಯ ಸೇವೆ ಎಂದು ಹೇಳಿ ನಾಳೆ ದಿವಸ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂತಹ ಕಾರ್ಮಿಕರು ರೈತರು ಟೊಮ್ಯಾಟೋ ಹೋಗಿಬಿಟ್ಟಿದೆ ಎಂದು ಏನಾದರೂ ಬೀದಿಗೆ ಬಂದು ಹೋರಾಟ ಮಾಡಿದರೆ ಇವೆಲ್ಲವೂ ನಿಷೇಧ. ಅವರೂ ಹೋರಾಟ ಮಾಡಬಾರದು. ಎಲ್ಲವನ್ನೂ ನಿಷೇಧ ಮಾಡಲಿಕ್ಕೆ ಈ ಕಾನೂನು ತಂದಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರತಕ್ಕಂತಹ ಈ ಸದನ ಇದನ್ನು ಒಪ್ಪಬೇಕಾ? ಇದು ಒಂದು. ಇನ್ನೊಂದು ವಿಚಿತ್ರ ಇದೆ ಇದರಲ್ಲಿ. ವಾರಂಟ್ ಇಲ್ಲದೆ ದಸ್ತಗಿರಿ. ಯಾವ ಕಾನೂನು ಯಾವ ಸಿಆರ್‌ಪಿಸಿ, ಯಾವ ಸಂವಿಧಾನದಲ್ಲಿ ಹೇಳುತ್ತದೆ ಇದು? ವಾರಂಟ್ ಇಲ್ಲದೆ ದಸ್ತಗಿರಿ ಮಾಡತಕ್ಕಂಥದ್ದು, ಪೇಜ್ 4ರಲ್ಲಿ ಎಂಟನೇ ಭಾಗ ವಾರಂಟ್ ಇಲ್ಲದೆ ದಸ್ತಗಿರಿ. 73 ದಂಡ ಪ್ರಕ್ರಿಯೆ ಸಂಹಿತೆಯಲ್ಲಿ ಏನೇ ಇದ್ದರೂ, 74 ರ ಕೇಂದ್ರ ಅಧಿನಿಯಮದ ಸಂಖ್ಯೆ ಏನೇ ಇದ್ದರೂ ಯಾವ ಒಬ್ಬ ಪೋಲಿಸ್ ಅಧಿಕಾರಿಯು, ಯಾವ ಒಬ್ಬ ವ್ಯಕ್ತಿಯು ಅಧಿನಿಯಮದ ವಿರುದ್ಧ ಯಾವುದೇ ಅಪರಾಧ ಮಾಡಿರುವನೆಂದು ಸಕಾರಣವಾದ ಸಂಶಯ ಪಟ್ಟಲ್ಲಿ ಅವನನ್ನು ವಾರಂಟ್ ಇಲ್ಲದೆ ದಸ್ತಗಿರಿ ಮಾಡಬಹುದು. ಈಗಲೇ ಈ ಪೋಲಿಸ್‌ನವರಿಗೆ ಎಷ್ಟು ಅಧಿಕಾರ ಇದೆ ಎಂದರೆ, ಒಬ್ಬ ಪ್ರಧಾನ ಮಂತ್ರಿಗೆ ಒಬ್ಬನನ್ನು ಹಿಡಿದುಕೊಳ್ಳುವುದಕ್ಕೆ ಈ ದೇಶದಲ್ಲಿ ಅಧಿಕಾರ ಇಲ್ಲ. ಆದರೆ ಒಬ್ಬ

ಪೋಲಿಸ್‌ನವನು ಯಾರೋ ದಾರಿಯಲ್ಲಿ ಹೋಗುವವರಿಗೆಲ್ಲಾ ಕರೆದು ಕೊಂಡು ಬಂದು ಬಾರಯ್ಯ ನಿನ್ನ ಮೇಲೆ ಅನುಮಾನ ಇದೆ ಎಂದು ಹೇಳಿ ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಬಹುದು. ಇದರಲ್ಲಿ ಇನ್ನೊಂದು ಇದೆ ಅಧ್ಯಕ್ಷರೆ, ಈ ಬಿಲ್ ಯಾವ ರೀತಿ ಇದೆ ಎಂದರೆ, ಪ್ರಚೋದನೆ ಇತ್ಯಾದಿಗೆ ದಂಡ. ಪುಟ 3ರಲ್ಲಿ ಐದನೆಯದು. ನಾನು ಒಬ್ಬ ಶಾಸಕ, ಮಾಧುಸ್ವಾಮಿ ಒಬ್ಬ ಶಾಸಕರು. ಯಾರೋ ಜನರ ಸಮಸ್ಯೆ ತೆಗೆದುಕೊಂಡು ಬಂದು ನಮಗೆ ಹೇಳಿದಾಗ ಹೋರಾಟ ಮಾಡಿ ಎಂದೂ ಸರ್ಕಾರದ ಮೇಲೆ ಡಿಮಾಂಡ್ ಇಡಿ ಎಂದು ಹೇಳಿದರೆ, ಇವರು ಹೋರಾಟಕ್ಕೆ ಪ್ರಚೋದನೆ ಮಾಡಿದ್ದಾರೆಂದು ಹೇಳಿ ನಮಗೆ ಕೂಡ ನಾಳೆ ದಂಡ ಹಾಕಬಹುದು. ವಾರಂಟ್ ಇಲ್ಲದೆ ದಸ್ತಗಿರಿ ಮಾಡಿದಿರಿ ಎಂದರೆ, ಪೋಲಿಸ್‌ನವರಿಗೆ ಅದು ಸ್ಪೆಸಿಫಿಕ್ಕಾಗಿ ಏನೇ ಇದ್ದರೂ ಯಾವ ಒಬ್ಬ ಪೋಲಿಸ್ ಅಧಿಕಾರಿಯು, ಯಾವ ಒಬ್ಬ ವ್ಯಕ್ತಿಯು ಈ ಅಧಿನಿಯಮದ ವಿರುದ್ಧ ಯಾವುದೇ ಅಪರಾಧ ಮಾಡಿರುವನೆಂದು, ಅಂದರೆ ಅವನೇ ತೀರ್ಮಾನ ಮಾಡುವ ಹಕ್ಕು ಪುನಃ ಪೋಲಿಸ್ ನವರಿಗೆ ಕೊಟ್ಟಿದ್ದಾರೆ. ಇವನು ತಪ್ಪು ಮಾಡಿದ್ದಾನೆ ಅಥವಾ ಇಲ್ಲವೆಂದು ತೀರ್ಮಾನ ಮಾಡುವ ಹಕ್ಕು ಸೋಮೋಟೋ ಅವನಿಗೆ ಇದೆ. ಇವನು ತಪ್ಪು ಮಾಡಿದ್ದಾನೆ, ಇವನು ಸ್ಟ್ರೈಕ್ ಮಾಡಿದ್ದಾನೆ, ಅಥವಾ ಸ್ಟ್ರೈಕ್ ಮಾಡಲಿಕ್ಕೆ ಪ್ರಚೋದನೆ ಮಾಡಿದ್ದಾನೆಂದು ಹೇಳಿ ಒಬ್ಬ ಪೋಲಿಸ್ ಕಾನ್‌ಸ್ಟೇಬಲ್ ತೀರ್ಮಾನ ಮಾಡಿ ನೀನು ಪೋಲಿಸ್ ಸ್ಟೇಷನ್‌ಗೆ ಬಾರಪ್ಪ ಎಂದರೆ ನಾನು ಹೋಗಬೇಕು ಪೋಲಿಸ್ ಸ್ಟೇಷನ್‌ಗೆ. ಇದು ಪ್ರಜಾಪ್ರಭುತ್ವ! ಅದೇ ರೀತಿಯಲ್ಲಿ ಕೆಲಸ ಮಾಡುವ ಕಾನೂನು ಬಾಹಿರ ನಿರಾಕರಣೆಗೆ ದಂಡ. ಕಾನೂನು ಬಾಹಿರದಂತಹ ಕೆಲಸಗಳನ್ನು ಮಾಡಿದಂತಹ ಫ್ಯಾಕ್ಟರಿ ಮಾಲೀಕರಿಗೆ ಈ ದೇಶದಲ್ಲಿ ದಂಡ ಇಲ್ಲ. ಯಾರಿಗೂ ದಂಡ ಹಾಕಿದ್ದನ್ನು ಇದುವರೆಗೂ ನೋಡಲೇ ಇಲ್ಲ. ಆದರೆ ಇವರಿಗೆ ಮಾತ್ರ ದಂಡ ಹಾಕಬೇಕು. ಕೆಲಸ ಮಾಡಲು ಕಾನೂನು ಬಾಹಿರ ನಿರಾಕರಣೆ, ಯಾವ ಒಬ್ಬ ವ್ಯಕ್ತಿಯೂ ಯಥೋಚಿತರಾದ ಕಾರಣವಿಲ್ಲದೆ ಯಾವುದೇ ಅತ್ಯಾವಶ್ಯಕ ಸೇವೆಗಳಲ್ಲಿ ಕೆಲಸ ಮಾಡಲು ನಿರಾಕರಿಸಿದರೆ, ಅಥವಾ ನಿರಾಕರಿಸುವುದನ್ನು ಮುಂದುವರೆಸಿದರೆ ಅಂತಹ ನಿರಾಕರಣೆಯು ಈ ಅಧಿನಿಯಮದ ಅಡಿಯಲ್ಲಿ ಕಾನೂನುಬಾಹಿರವಾಗಿರುವುದರಿಂದ ಅವನು ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದ ಅವಧಿಯವರೆಗೂ ವಿಸ್ತರಿಸಬಹುದಾದಂತಹ ಕಾರಾಗೃಹವಾಸದ, ಅಥವಾ 2,000 ರೂಪಾಯಿಗಳವರೆಗೆ ವಿಸ್ತರಿಸ ಬಹುದಾದಂತಹ ಜುಲ್ಮಾನೆಯಿಂದ ಮತ್ತು ಅವರೆಡರಿಂದಲೂ ದಂಡಿತ

ನಾಗತಕ್ಕದ್ದು. ಇದನ್ನು ಯಾರು ತೀರ್ಮಾನ ಮಾಡಿದರು? ಅಧ್ಯಕ್ಷರೆ, ನಾವು ಪ್ರಜಾಪ್ರಭುತ್ವದಲ್ಲಿದ್ದೇವೆಯೋ ಎಲ್ಲಿದ್ದೇವೆ? ಈ ದೇಶದಲ್ಲಿ ಸಂವಿಧಾನ ಇದೆ, ಸಂವಿಧಾನ ಕೆಲವು ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ, ಅದನ್ನು ರಕ್ಷಣೆ ಮಾಡಬೇಕಾದದ್ದು ನಾವು; ನಾವೆಲ್ಲಾ ಶಾಸಕರಾಗಿ ಆಯ್ಕೆಯಾದಾಗ ಮಂತ್ರಿಗಳು, ಮುಖ್ಯಮಂತ್ರಿಗಳು ಸಂವಿಧಾನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದಾಗ ಸಂವಿಧಾನ ಎತ್ತಿ ಹಿಡಿಯುತ್ತೇವೆಂದು ನಾವು ಪ್ರಮಾಣವಚನ ಮಾಡುತ್ತೇವೆ; ಸಂವಿಧಾನ ಬಾಹಿರವಾದ ಈ ಕಾನೂನನ್ನು ತರುತ್ತೇವೆ ಕೆಲಸ ಮಾಡಲು ಕಾನೂನುಬಾಹಿರ ನಿರಾಕರಣೆಗೆ ಹಣಕಾಸಿನ ನೆರವು ನೀಡಿದಕ್ಕಾಗಿ ದಂಡ. ಅವರಿಗೂ ದಂಡ. ಇದು ಹೇಗಿದೆ ನೋಡಿ, ಒಂದು ಕಡೆ ಪ್ರಚೋದನೆ ಮಾಡಿದವರಿಗೆ ದಂಡ, ಇನ್ನೊಂದು ಕಡೆ ಕಾನೂನುಬಾಹಿರ ನಿರಾಕರಣೆಗೆ ಹಣಕಾಸಿನ ನೆರವು ನೀಡಿದ್ದಕ್ಕಾಗಿ ದಂಡ. ಇತರ ಶಿಸ್ತು ಕ್ರಮಗಳ ಜೊತೆ 4 ಅಥವಾ 5, 6ನೇ ಪ್ರಕರಣದಡಿಯಲ್ಲಿ ಕ್ರಮ ಕೈಗೊಳ್ಳುವುದು, ಇದೆಲ್ಲಾ ಆದಮೇಲೆ ವಾರೆಂಟ್ ಇಲ್ಲದೇ ದಸ್ತಗಿರಿ ಮಾಡತಕ್ಕಂಥದ್ದು. ಏನ್ ಸಾರ್, ಏಕೆ ಈ ಕಾನೂನು ಬೇಕಾಗಿತ್ತು? ಏನಾಗಿದೆ ಇವೊತ್ತು? ಈ ಅಗತ್ಯ ಸೇವೆಗಳ ನಿರ್ವಹಣೆಯಲ್ಲಿ ತೊಂದರೆ ಏನಾಗಿದೆ? ಇಲ್ಲಿ ಏನೇನು ತೊಂದರೆಗಳಾಗಿವೆ? ಏನೇನು ಇವೊತ್ತು ಉತ್ಪಾದನೆ ನಿಂತುಹೋಗಿದೆ? ಎಲ್ಲಿ ಇವೊತ್ತು ಸಾಗಾಣಿಕೆ ನಿಂತುಹೋಗಿದೆ? ಈ ಬಿಲ್ ತರಬೇಕಾಗಿರತಕ್ಕಂಥ ಅವಶ್ಯಕತೆ ಆದರೂ ಏನಿತ್ತು? ಆ ಉದ್ದೇಶಗಳಲ್ಲಿ ಏನು ಹೇಳಿದ್ದಾರೆಂದರೆ ಜಲ ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಉತ್ಪಾದನೆ, ಶೇಖರಣೆ, ಸಾಗಾಣಿಕೆ, ಪೂರೈಕೆ ಅಥವಾ ವಿತರಣೆಗೆ ಸಂಬಂಧಪಟ್ಟಂತೆ ಹಾಗೂ ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಒಯ್ಯುವುದು. ಇದು ಮುಖ್ಯವಾಗಿ ಟ್ರಾನ್ಸ್‌ಪೋರ್ಟ್‌ಗಳಲ್ಲಿ ಕೆಲಸ ಮಾಡುವವರಿಗೆ ಅಂದರೆ ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ, ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರುಗಳು ಮುಷ್ಕರ ಮಾಡಬಾರದು. ಅಷ್ಟೇ ಅಲ್ಲಾ ಸ್ವಾಮಿ ನಿಮ್ಮ ಉದ್ದೇಶ? ಬೇರೆ ಏನಿಲ್ಲ ತಾನೆ? ಹಾಗಾದರೆ ಅವರು ಮನುಷ್ಯರೇ ಅಲ್ಲ, ನೀವೇನು ಕಾನೂನು ಮಾಡಿದರೂ ತಲೆಬಾಗಿ ಒಪ್ಪಿಕೊಂಡು ಹೋಗುತ್ತಿರಬೇಕು. ನೀವು ಸಂಬಳ ಕಡಿಮೆ ಮಾಡಿದರೂ ಸುಮ್ಮನೆ ಹೋಗಬೇಕು, ನಾಳೆ ದಿವಸ ಕೆ.ಎಸ್.ಆರ್.ಟಿ.ಸಿ.ಯನ್ನು ಖಾಸಗಿಯವರಿಗೆ ಕೊಟ್ಟುಬಿಡುತ್ತೇವೆ ಎಂದರೆ ಆಗಲೂ ಅವರು ಸುಮ್ಮನೇ ಇರಬೇಕು, ಅವರು ಇನ್ನೊಬ್ಬರು ಯಾರಿಗಾದರೂ ಕಾಂಟ್ರಾಕ್ಟ್‌ಗೆ ಕೊಟ್ಟುಬಿಡುತ್ತೇವೆ ಎಂದರೂ ನೌಕರರು ಸುಮ್ಮನೆ ಇರಬೇಕು, ಮಾತಾಡಬಾರದು. ಏಕೆಂದರೆ ಮೋಟಾರು

ವಾಹನ ಸಂಸ್ಥೆಗಳಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಇದರ ಉದ್ದೇಶ ನಿಮ್ಮದು ಇದೇ ತಾನೆ? ಇದೊಂದು ಪ್ರಜಾಪ್ರಭುತ್ವ ದೇಶ! ಈ ಉದ್ದೇಶಗಳಿಗೋಸ್ಕರ ಇವ್ಹೊತ್ತು ಈ ಬಿಲ್‌ನ್ನು ತಂದಿದ್ದೀರಾ? ಅಂಥ ಅರ್ಜೆನ್ಸಿ ಇತ್ತು? ಏನಾಗಿದೆ? ಅಂಥ ಅನಾಹುತಗಳು ಏನಾದರೂ ನಡೆದಿದೆಯೇ? ಈ ರಾಜ್ಯದಲ್ಲಿ ಏನಾದರೂ ಅನಾಹುತಗಳು ನಡೆದಿದೆಯೇ? ಇಂತಹ ಕಾನೂನುಬಾಹಿರವಾದಂಥ ಬಿಲ್‌ನ್ನು ತೆಗೆದುಕೊಂಡು ಬಂದು ವಿರೋಧ ಪಕ್ಷಗಳು ಇದಕ್ಕೆ ಸಹಕರಿಸಲಿಲ್ಲ ಎನ್ನುತ್ತಾರೆ. ಹೋಗಲಿ ಸಂವಿಧಾನದಲ್ಲಿ ಇದಕ್ಕೆ ಏನಾದರೂ ಹಕ್ಕುಗಳು ಇದೆಯೋ, ಅಥವಾ ಇಲ್ಲವೋ ಅದನ್ನಾದರೂ ಹೇಳಿ. ಸಂವಿಧಾನದಲ್ಲಿ ನೌಕರರ ಹಕ್ಕುಗಳಿಗೆ ಏನಾದರೂ ಅವಕಾಶ ಉಂಟೋ, ಇಲ್ಲವೋ, ಅದನ್ನಾದರೂ ಹೇಳಿ. ಮುಷ್ಕರ ಹೂಡತಕ್ಕಂಥ ಹಕ್ಕಿಲ್ಲವೇ? ಸಂಘಟನೆ ಮಾಡಿ ಕೊಳ್ಳತಕ್ಕಂಥ ಹಕ್ಕಿಲ್ಲವೆ? ಬೇಡಿಕೆಗಳನ್ನು ಕೇಳುವುದಕ್ಕೆ ಹಕ್ಕಿಲ್ಲವೆ? ಸಂವಿಧಾನದಲ್ಲಿ ಇದನ್ನೆಲ್ಲಾ ನಿಷೇಧ ಮಾಡಿದ್ದರೆ ನಾವು ಕೇಳುವುದು ಬೇಡ. ನೀವು ಕೊಟ್ಟಿರತಕ್ಕಂಥ ಸಂವಿಧಾನ, ನೀವು ಪ್ರಮಾಣವಚನ ಮಾಡಿ ಸ್ವೀಕಾರ ಮಾಡಿದಂಥ ಅಧಿಕಾರದ ಸಂವಿಧಾನದಲ್ಲಿ ಕೊಟ್ಟಿರತಕ್ಕಂಥ ಮೂಲಭೂತ ಹಕ್ಕುಗಳನ್ನೇ ಸಂಪೂರ್ಣವಾಗಿ ನಾಶ ಮಾಡತಕ್ಕಂಥ ಈ ಬಿಲ್‌ನ್ನು ಖಂಡಿತ ಇಲ್ಲಿ ಪಾಸ್ ಮಾಡಿಸಬಾರದು. ಈ ಬಿಲ್ ಏನಾದರೂ ಇಲ್ಲಿ ಪಾಸ್ ಆದರೆ ಇದೊಂದು ಕರಾಳವಾದಂಥ ಅಧ್ಯಾಯ ಎಂದು ಹೇಳಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಬಿಲ್ ಟೋಟಲಿ ಎರೇನಿಯಸ್ ಬಿಲ್. ಸ್ಪೆಸಿಫಿಕ್ ಆಗಿ ಎನೆನ್ಸಿಷಿಯಲ್ ಸರ್ವಿಸಸ್ ಯಾವುದು ಎಂದು ಬಿಲ್‌ನಲ್ಲಿ ಶೆಡ್ಯೂಲ್‌ನಲ್ಲಿ ಹೇಳಿಬಿಟ್ಟಿದ್ದಾರೆ. ಎಸೆನ್ಸಿಷಿಯಲ್ ಸರ್ವಸಸ್‌ನಲ್ಲಿ ಈಗಾಗಲೇ ಅವರಿಗೆ ಅವಕಾಶ ಇದೆ ಆರು ತಿಂಗಳವರೆಗೆ ಎಕ್ಸ್‌ಟೆಂಡ್ ಮಾಡಿಕೊಂಡು ಹೋಗುವುದನ್ನು ಬಿಟ್ಟರೆ ಇದು ಪರ್ಮನೆಂಟ್ ಆಗಿ ಇಟ್ಟುಕೊಳ್ಳುವಂಥ ಶಾಸನಗಳಲ್ಲ. ಯಾವುದೇ ಒಬ್ಬರ ಹಕ್ಕನ್ನು ಶಾಶ್ವತವಾಗಿ ಚ್ಯುತಿ ಮಾಡುವುದಕ್ಕೆ ಬರುವುದಿಲ್ಲ. ಆಸ್ಪತ್ರೆ ಇತ್ತು, ಪೋಲಿಸ್ ಇತ್ತು, ಡೈರಿ ಇತ್ತು, ಬೇಕಾದಷ್ಟು ಇತ್ತು. ಅದನ್ನು ಈಗ ಎಕ್ಸ್‌ಟೆಂಡ್ ಮಾಡುತ್ತಿದ್ದರೆ. ನೀರು, ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಪೋರ್ಟ್. ಇವುಗಳನ್ನೂ ಕೂಡ ಎಸೆನ್ಸಿಷಿಯಲ್ ಸರ್ವಿಸಸ್ ವ್ಯಾಪ್ತಿಗೆ ತರಬೇಕೆಂದು ಇವರ ಉದ್ದೇಶವಾಗಿದ್ದರೆ ಸ್ಪಷ್ಟವಾಗಿ ಹೇಳಬೇಕು. ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಗಾಣಿಸುವುದಕ್ಕಾಗಿ ಇರುವ ಯಾವುದೇ ಸಾರಿಗೆ ಸೇವೆ ಎಂದರೆ ಇದು ಆಟೋರಿಕ್ಷಾದಿಂದ ಸ್ಟಾರ್ಟ್

ಆಗುತ್ತದೆ. ಸಾರ್ವಜನಿಕ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಗಿರುವ ವೆಹಿಕಲ್ ಯಾವುದು ಅಂದರೆ ಪ್ರೈವೇಟ್ ಕ್ಯಾರಿಯೇಜ್ ಬರುತ್ತದೆ, ಪಬ್ಲಿಕ್ ಕ್ಯಾರಿಯೇಜ್‌ನಲ್ಲಿ ನಿಮ್ಮ ಕೆ.ಎಸ್.ಆರ್.ಟಿ.ಸಿ. ಬರುತ್ತದೆ, ಲಾರಿಗಳು ಬರುತ್ತವೆ, ಆಟೋ ಬರುತ್ತದೆ. ಇವರೆಲ್ಲರನ್ನೂ ಎಸೆನ್ಷಿಯಲ್ ಸರ್ವಿಸಸ್ ವ್ಯಾಪ್ತಿಯಲ್ಲಿ ನೀವು ತರುತ್ತಿದ್ದೀರಾ ಅಥವಾ ಗೌವರ್ನಮೆಂಟ್ ಓನ್ಡ್ ಕೆ.ಎಸ್.ಆರ್.ಟಿಸಿಯನ್ನು ಎಸೆನ್ಷಿಯಲ್ ಸರ್ವೀಸಸ್‌ನಲ್ಲಿ ತರುವುದಕ್ಕೆ ಹೊರಟಿದ್ದೀರಾ ಎಂದಾದರೂ ಹೇಳಬೇಕಲ್ಲಾ ಸಾರ್? ಈ ಬಿಲ್‌ನಲ್ಲಿ ಹೇಳಬೇಕು, ಯಾವುದಕ್ಕೆ ಇಟ್ಟಿದ್ದೀರಿ ಈ ಪ್ರಾವಿಷನ್ ಎಂದು? ನಾಳೆ ದಿವಸ ಆಟೋರಿಕ್ಷಾದವರು ಸ್ಟ್ರೈಕ್ ಮಾಡುವ ಹಾಗೆ ಇಲ್ಲವೆ? ಲಾರಿಯವರೂ ಯಾರೂ ಸ್ಟ್ರೈಕ್ ಮಾಡುವ ಹಾಗಿಲ್ಲವೇ? ಇನ್ನು ಮುಂದೆ ರಾಜ್ಯದಲ್ಲಿ ಈ ಬಿಲ್ ಪ್ರಕಾರ ಯಾರ ಸ್ಟ್ರೈಕ್ ಮಾಡುವ ಹಾಗೆ ಇಲ್ಲಾ. ದಿಢೀರ್ ಅಂತ ವಿತೌಟ್ ವಾರೆಂಟ್ ಅರೆಸ್ಟ್ ಮಾಡುತ್ತೇವೆಂದು ಹೇಳಿ ಇಲ್ಲೊಂದು ಶಾಸನ ಪಾಸ್ ಆಗಿಬಿಟ್ಟರೆ ಅವರ್ಯಾರೂ ಈ ರಾಜ್ಯದ ಪ್ರಜೆಗಳೇ ಅಲ್ಲವ? ಅವರಿಗೆ ಲಿಜಿಟಮೇಟ್ ರೈಟ್‌ಗಳು, ಹಕ್ಕೇ ಇಲ್ಲವೇ? ಇಂಥ ಶಾಸನಗಳನ್ನು ಇಲ್ಲಿ ತರುವುದು, ನೀವು ಹೇಳೋದು ಹೇಳಿದಿರಿ, ಚರ್ಚೆ ಮುಗಿದುಹೋಯಿತು ಪಾಸ್ ಮಾಡಿದ್ದೇವೆ ಎಂದು ಹೋಗುವುದಾದರೆ ಇದೇನು ಡೆಮಾಕ್ರಸಿಯೇ? ಏನು? ಮುಂದಕ್ಕೆ ಬನ್ನಿ ಸಾರ್ ಮೂರನೆಯ ರಾಜ್ಯ ವಿಧಾನಮಂಡಲವು ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯಡಿಯ ಯಾವುದರ ಸಂಬಂಧದಲ್ಲಿ ಕಾನೂನು ರಚಿಸಲು ಅಧಿಕಾರ ಹೊಂದಿದೆಯೋ ಆ ವಿಷಯಕ್ಕೆ ಸಂಬಂಧಿಸಿದ ಮತ್ತು ಯಾವುದರಲ್ಲಿ ಕೆಲಸ ಮಾಡಲು ನಿರಾಕರಿಸಿದರೆ ಯಾವುದೇ ಸಾರ್ವಜನಿಕ ಬಳಕೆ ಸೇವೆಯನ್ನು ಅಥವಾ ಸಾರ್ವಜನಿಕ ಬದ್ಧತೆ ನಿರ್ವಹಿಸಿಕೊಂಡು ಬರುವುದಕ್ಕೆ ಅಥವಾ ಸಮುದಾಯದ ಜೀವನಕ್ಕೆ ಅವಶ್ಯಸರಬರಾಜನ್ನು ನಿರ್ವಹಿಸಿಕೊಂಡು ಬರುವುದಕ್ಕೆ ತೊಂದರೆ ಉಂಟಾಗುತ್ತದೆಯೋ ಅದೆಲ್ಲವನ್ನೂ ಸೇರಿಸಿ, ಅದೆಲ್ಲದನ್ನೂ ಅತ್ಯಾವಶ್ಯಕ ಸೇವೆಯೆಂದು ಅಧಿಸೂಚನೆಯಲ್ಲಿ ಘೋಷಿಸಬಹುದು. ನೀವು ಯಾವುದನ್ನು ಘೋಷಿಸಿದ್ದೀರಿ. Anything can be brought under the Essential Services Act, ಎಂದು ನೀವು ಇಲ್ಲಿ ಎಕ್ಸ್‌ಪ್ಲೈನ್ ಮಾಡಿಬಿಟ್ಟು ಯಾರೂ ಇನ್ನು ಮುಂದೆ ನೌಕರಿ ಮಾಡುವವರು ಪ್ರೊಟೆಸ್ಟೇ ಮಾಡುವ ಹಾಗಿಲ್ಲ. ನೌಕರಿ ಮಾಡುವವರು ಅರ್ಗನೈಸ್ ಆಗೋ ಹಾಗಿಲ್ಲ, ನಿಮ್ಮ Legislature Secretariat can be brought under this. Anything can be brought under this. ಇಂಥ ಒಂದು

ಬಿಲ್‌ಗಳನ್ನು ಇಟ್ಟು ನಿಮ್ಮನ್ನು ವಿತೌಟ್ ವಾರೆಂಟ್ ಅರೆಸ್ಟ್ ಮಾಡುತ್ತೇವೆ ಎಂದರೆ.,

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾಧುಸ್ವಾಮಿಯವರೆ, ಒಂದ್ನಿಮಿಷ, ಸರ್ಕಾರಿ ನೌಕರರನ್ನು ಎಸೆನ್ಸಿಷಿಯಲ್ ಸರ್ವಿಸಸ್‌ನಲ್ಲಿ ತರಬಾರದು ಎನ್ನುವುದಾದರೆ ನಿಮ್ಮ ವಾದಕ್ಕೆ ಒಪ್ಪುವುದಾದರೆ ಪೋಲಿಸರನ್ನೂ ಎಸೆನ್ಸಿಷಿಯಲ್ ಸರ್ವೀಸ್‌ನಿಂದ ಹೊರಗಡೆ ಇಡುವುದಕ್ಕೆ ಸಾಧ್ಯವಿದೆಯೆ? ಪೋಲಿಸರು ಸರ್ಕಾರಿ ನೌಕರರಲ್ಲವಾ? ಅವರನ್ಯಾಕೆ ಎಸೆನ್ಸಿಷಿಯಲ್ ಸರ್ವೀಸಸ್‌ನಲ್ಲಿ ತಂದು ಅವರಿಗೆ ನಿಬಂಧನೆಗಳನ್ನು ವಿಧಿಸುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ಬಿ.ಸಿ. ಪಾಟೀಲ್‌ರವರೇ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೆ, ಎಸೆನ್ಸಿಷಿಯಲ್ ಸರ್ವೀಸಸ್ ಯಾವುದು ಎಂದು ಶೆಡ್ಯೂಲ್ ಆಗಿಬಿಟ್ಟಿದೆ. ಅದನ್ನು ನಾವು ಕ್ವೊಶ್ಚನ್ ಮಾಡಲಿಲ್ಲ. ಎಸೆನ್ಸಿಷಿಯಲ್ ಸರ್ವೀಸಸ್ ಮ್ಯಾಟರ್ ಏನು ಇವೊತ್ತು ಸ್ಟಾರ್ಟ್ ಆಗಿರುವ ವಿಷಯವಲ್ಲ. ನೀವು ಶೆಡ್ಯೂಲ್‌ನಲ್ಲಿಯೇ ಬಂದುಬಿಟ್ಟಿದೆ ಎಸೆನ್ಸಿಷಿಯಲ್ ಸರ್ವೀಸಸ್; ಹಾಗಾದರೆ ಮಿಲ್ಟಿಯವರು ಸ್ಟ್ರೈಕ್ ಮಾಡಿರಿ ಎಂದರೆ, ಪೋಲಿಸ್‌ನವರು ಸ್ಟ್ರೈಕ್ ಮಾಡಲಿ, ಹೆಲ್ತ್ ಸರ್ವೀಸಸ್‌ನವರು ಸ್ಟ್ರೈಕ್ ಮಾಡಲಿ ಎಂದು ನಾವು ಇಲ್ಲಿ ನಿಂತುಕೊಂಡು ಭಾಷಣ ಮಾಡುವುದಕ್ಕೆ ಆಗುವುದಿಲ್ಲ. ಹೊಸ ಹೊಸ ಕ್ಯಾಟಗರಿಗಳನ್ನು ಇದರಲ್ಲಿ ಏನು ತರುವುದಕ್ಕೆ ಹೊರಟಿದ್ದೀರಿ, ಇದು ನಿಜವಾಗಿ ಮಾಡಬೇಕೇ? ನಿಜವಾಗಿ ಇವರನ್ನೆಲ್ಲಾ ವಿತೌಟ್ ವಾರೆಂಟ್ ಅರೆಸ್ಟ್ ಮಾಡಬೇಕೇ? ನಿಜವಾಗಿ ಇಂಥ ಸಂಘಟನೆಗೆ ಸಂಬಂಧಪಟ್ಟಂತೆ ಯಾರಾದರೂ ಒಬ್ಬರು ಎದ್ದುನಿಂತುಕೊಂಡು ಭಾಷಣ ಮಾಡಿಬಿಟ್ಟರೆ ಅವರನ್ನು ಪ್ರಚೋದಕರು, ಅಬೇಟಾರ್ ಎಂದು ಹೇಳಿ ನೀವು ಅರೆಸ್ಟ್ ಮಾಡಬೇಕೇ? ಹಾಗಾದರೆ ಸ್ವತಂತ್ರವೇ ಬೇಡವೇ ಎಂದು ನಾವು ಕೇಳುತ್ತಿರುವುದು. ಇದಕ್ಕೆ ಜಸ್ಟಿಫಿಕೇಶನ್ ಏನು? ಕೆ.ಎಸ್.ಆರ್.ಟಿ.ಸಿ. ಸ್ಟ್ರೈಕ್ ಆದರೆ ಜಸ್ಟಿಫಿಕೇಶನ್ ಇಲ್ಲ, ಜನಗಳು ಓಡಾಡುವುದಕ್ಕೆ ಆಗುವುದಿಲ್ಲವೆಂದು ಹೇಳಬಹುದು. ಹಾಗಾದರೆ ಆಟೋದವರು ಸ್ಟ್ರೈಕ್ ಮಾಡಬಾರದೇ?

ಶ್ರೀ ಬಿ.ಸಿ.ಪಾಟೀಲ್: ಈಗ ಇಲ್ಲಿ ಆಟೋದವರ ಪ್ರಶ್ನೆ ಬರಲಿಲ್ಲ. ಕೆ.ಎಸ್.ಆರ್.ಟಿ.ಸಿ. ಯವರು ಒಂದು ದಿನ ಸ್ಟ್ರೈಕ್ ಮಾಡಿದರೆ ಎಷ್ಟು ನಷ್ಟವಾಗುತ್ತದೆ ಎಂಬುದು ಗೊತ್ತು. ವೈದ್ಯರು ಸ್ಟ್ರೈಕ್ ಮಾಡಿದರೆ ಎಷ್ಟು ತೊಂದರೆಯಾಗುತ್ತದೆ ಎಂಬುದು ಗೊತ್ತು ಕೆ.ಇ.ಬಿ. ಒಂದು ದಿವಸ ಕರೆಂಟ್ ತೆಗೆದರೆ ಎಷ್ಟು ತೊಂದರೆಯಾಗುತ್ತದೆ ಎಂಬುದು ಗೊತ್ತು. These are an coming under essential services.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ ಮಂತ್ರಿಗಳ ಗಮನ ಸೆಳೆಯುತ್ತಿರುವುದು ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಸಿಸ್ಟಂನಲ್ಲಿ ಪ್ರೈವೇಟ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಕೂಡ ಬಂದಿದೆಯಾ? ಆಟೋರಿಕ್ಷಾ ಸೇರುತ್ತದೆಯೇ? ಟ್ಯಾಕ್ಸಿ ಸೇರುತ್ತದೆಯೇ? ಸಿವಿಲ್ ಬಸ್‌ಗಳು ಅಥವಾ ಅಪರೇಟ್ ಮಾಡುತ್ತಿರುವ ಓನರ್ ಬಸ್‌ಗಳೂ ಸೇರುತ್ತದೆಯೇ, ಇವುಗಳ ಬಗ್ಗೆ ಎಲ್ಲಾದರೂ ಒಂದು ಕಡೆ ಹೇಳಬೇಕಾಗಿತ್ತು ಎಂದೇ ನಾವು ಕೇಳುತ್ತಿರುವುದು. ಸಾರ್ವಜನಿಕ ಮೋಟಾರು ವಾಹನಗಳಲ್ಲಿ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಸಾಗಿಸುವುದಕ್ಕಾಗಿ ಇರುವ ಯಾವುದೇ ಸಾರಿಗೆ ಸೇವೆ ಸರಿಯೇ? ಅದನ್ನು ನಾನು ಪ್ರಶ್ನೆ ಮಾಡುತ್ತಿರುವುದು. ನೀವೇನೋ ಕೆ.ಎಸ್.ಆರ್.ಟಿ.ಸಿ.ಯವರು ಸ್ಟ್ರೈಕ್ ಮಾಡಿದರೆ ಎಸೆನ್ಷಿಯಲ್ ಸರ್ವೀಸ್ ಎಂದು ಟ್ರೀಟ್ ಮಾಡುತ್ತೇವೆ ಎಂದು ಹೇಳಿದ್ದರೆ ನಾನೇಕೇ ಪ್ರಶ್ನೆ ಮಾಡಲಿ? ನಾಳೆ ಇದರಿಂದ ಸಿವಿಲ್ ಬಸ್‌ನವರು ಸ್ಟ್ರೈಕ್ ಮಾಡಿದರೆ ಅವರನ್ನೂ ಅರೆಸ್ಟ್ ಮಾಡಬಹುದಲ್ಲಾ. ಈ ಆ್ಯಕ್ಟ್ ಕೆಳಗಡೆ ಆಟೋ ಡ್ರೈವರ್‌ನ್ನು ಅರೆಸ್ಟ್ ಮಾಡಬಹುದಲ್ಲಾ. ಈ ತರಹ ಒಂದು ಕಾಯಿದೆಯನ್ನು ತರುವಾಗಲೇ ಎರೇನಿಯಸ್ ಆಗಿ ತಂದರೆ...

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಕೆ.ಎಸ್.ಆರ್.ಟಿ.ಸಿ.ಯವರನ್ನು ಈ ಆ್ಯಕ್ಟ್ ಕೆಳಗಡೆ ತಂದರೆ ಪರವಾಗಿಲ್ಲವೋ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇಲ್ಲ, ಇಲ್ಲ, ಎಸೆನ್ಷಿಯಲ್ ಸರ್ವೀಸ್ ಡಿಫೈನ್ ಮಾಡಿ ನೀವು ಹೇಳಿದ್ದನ್ನು ಬಿಟ್ಟು ಮುಂದಕ್ಕೆ ಹೇಳತ್ತಿದ್ದೇನೆ ರೆಡ್ಡಿಯವರೇ ನಾನು ಅದಕ್ಕೆ ವಿರುದ್ಧ ಎಂದು ತಾವೇಕೆ ಭಾವಿಸುತ್ತೀರಿ? ರಿಪೀಟ್ ಮಾಡಬಾರದು ಎಂದು ನಾನು ಹೇಳುತ್ತಿಲ್ಲ. ಅವರು ಹೇಳಿದ್ದನ್ನೇ ಹೇಳಿಕೊಂಡು ಹೋದರೆ ಯಾರಾದರೂ ಅಸೆಂಬ್ಲಿ ಎಂದು ಅನ್ನುತ್ತಾರೆಯೇ? ಈಗ ನೌಕರರನ್ನು ಅರೆಸ್ಟ್ ಮಾಡುವುದು ಸರಿ ಅಥವಾ ಒಬ್ಬ ಕಾರ್ಮಿಕರನ್ನು ವಿತೌಟ್ ವಾರೆಂಟ್ ಅರೆಸ್ಟ್ ಮಾಡುವುದು ಸರಿ ಎಂಬುದನ್ನು ನಾಗರೀಕ ಪ್ರಜ್ಞೆ ಇರುವ ಯಾರೂ ಒಪ್ಪುವುದಕ್ಕಾಗುವುದಿಲ್ಲ. ಅಪರಚ್ಯುನಿಟಿ ಕೊಡದೇ ಯಾರನ್ನಾದರೂ ಅರೆಸ್ಟ್ ಮಾಡಿ ಎಂದರೆ ಯಾರೂ ಒಪ್ಪುವುದಕ್ಕಾಗುವುದಿಲ್ಲ. ಅದೇನು ತಾವು ಹೇಳಿದ್ದೀರಿ ಅದನ್ನು ಬಿಟ್ಟು ನಾನು ಮುಂದಕ್ಕೆ ಬಂದಿದ್ದೇನೆ. ದಯಮಾಡಿ ಇದಕ್ಕೆ ಸವಿವರವಾದ ಉತ್ತರವನ್ನು ಅವರು ಕೊಡಬೇಕು. ಜಲ ಎಂದರೆ ನೀವು ಎಲ್ಲಿಂದ ಸ್ಟಾರ್ಟ್ ಮಾಡುತ್ತೀರಿ ಸಾರ್? ಡ್ರಿಂಕಿಂಗ್ ವಾಟರ್ ಕೊಡಲಿಲ್ಲ ಎಂದು ಹೇಳಿ ಅವರನ್ನು ಎಸೆನ್ಷಿಯಲ್ ಸರ್ವೀಸಸ್ ಕೆಳಗೆ ತರುತ್ತೀರಾ? ಜಲ ಮತ್ತು ವಿದ್ಯುತ್ ಅಂದುಬಿಟ್ಟರೆ anything in the universe. ಜಲ ಬಿಟ್ಟು ಏನಿದೆ

ಸಾರ್ ಇವೊತ್ತು? ಇಡೀ ವ್ಯಾಪ್ತಿಯಲ್ಲಿರುವವರನ್ನೆಲ್ಲಾ ನೀವು ಇವೊತ್ತು ವಿತೌಟ್ ವಾರೆಂಟ್ ಅರೆಸ್ಟ್ ಮಾಡುವ ಒಂದು ಕಾಯಿದೆಯನ್ನು ತರುವುದು ಸರಿಯಲ್ಲ. ಸ್ಪೆಸಿಫಿಕ್ ಆಗಿ ಹೇಳಬೇಕು, ಎಸೆನ್ಸಿಷಿಯಲ್ ಸರ್ವೀಸ್‌ನ್ನು ತಾವು ಡಿಫೈನ್ ಮಾಡಬೇಕು. ಇಂಥ ಕೆಲಸವನ್ನು ಮಾಡುವವನು ಕೆಲಸವನ್ನೇ ಮಾಡದೇ ಸ್ಟ್ರೈಕ್ ಮಾಡಿಕೊಂಡು ಹೋದರೆ ಸಾರ್ವಜನಿಕರಿಗೆ ಈ ಪ್ರಮಾಣದಲ್ಲಿ ತೊಂದರೆ ಆಗುವುದರಿಂದ ಅದನ್ನು ಅತ್ಯಗತ್ಯ ಸೇವೆ, ಅಗತ್ಯ ಸೇವೆ ಬೇರೆ, ಅತ್ಯಗತ್ಯ ಸೇವೆ ಬೇರೆ, ಅತ್ಯಗತ್ಯ ಸೇವೆ ಕೆಳಗಡೆ ತರುತ್ತಿದ್ದೇವೆ, ಆರು ತಿಂಗಳವರೆಗೆ ಈ ಶಾಸನ ಜಾರಿಯಲ್ಲಿರುತ್ತದೆ ಎಂದು ಡಿಫೈನ್ ಮಾಡಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್(ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಈ ಎಸೆನ್ಸಿಷಿಯಲ್ ಸರ್ವೀಸಸ್ ಬಿಲ್ ಏನು ತೆಗೆದುಕೊಂಡು ಬಂದಿದ್ದಾರೆ ನಿಜವಾಗಿಯೂ ಇದು ಒಂದು ಒಳ್ಳೆಯ ಸಲಹೆ. It is really good. No doubt. ಆದರೆ ಇದರಲ್ಲಿ ಏನಿದೆಯೆಂದರೆ ಎಸೆನ್ಸಿಷಿಯಲ್ ಸರ್ವೀಸಸ್‌ನಲ್ಲಿ ಯಾರು ಯಾರು ಕೆಲಸ ಮಾಡುವವರು ಎಂದು just speicifically ಒಂದು ಮೂರ್ನಾಲ್ಕು ಕೊಟ್ಟಿದ್ದೀರಿ. ಅದು ಮಾತ್ರ ತಪ್ಪಾಗಿದೆ. ಪೂರ್ತಿ ಎಸೆನ್ಸಿಷಿಯಲ್ ಸರ್ವೀಸಸ್‌ಗಳನ್ನು ಕೊಡಬೇಕು. ಒಬ್ಬ ಬ್ಯೂರೇಕ್ರಾಟ್ಸ್ ಹತ್ತು ದಿವಸ ಆಫೀಸ್‌ಗೇ ಬರುವುದಿಲ್ಲ. ಕೇಳಿದರೆ ಮೀಟಿಂಗ್‌ಗೇ ಎಂದು ಹೋಗುತ್ತಾರೆ. ಎಸೆನ್ಸಿಷಿಯಲ್ ಸರ್ವೀಸ್ ಅದೂ ಕೂಡ. ಅವರನ್ನು ತಾವು ಅರೆಸ್ಟ್ ಮಾಡುತ್ತೀರಾ? ಫಸ್ಟ್ ಅವರಿಂದ ಅರೆಸ್ಟ್ ಮಾಡಿಕೊಂಡು ಪ್ಯೂನ್‌ವರೆಗೆ ಎಲ್ಲರನ್ನೂ ಎಸೆನ್ಸಿಷಿಯಲ್ ಸರ್ವೀಸಸ್ ವ್ಯಾಪ್ತಿಗೆ ತರಬೇಕು. That is a challenge for the government. ಈ ದೇಶ, ಈ ರಾಜ್ಯ ಹಾಳಾಗುವುದು ಅವರಿಂದಲೇ, No doubt. No doubt. ಈಗ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಒಬ್ಬರು ಡಿಪೋ ಮ್ಯಾನೇಜರ್ ಆಗಿ ಆಫೀಸರ್ ಆಗಿರುತ್ತಾರೆ. ಆಂಧ್ರಪ್ರದೇಶಕ್ಕೆ ಡ್ರೈವರ್ ಹೋಗುತ್ತಿರುತ್ತಾನೆ. ಆಗ ಆ ಡ್ರೈವರ್‌ಗೆ ಈ ಅಧಿಕಾರಿ ಆಂಧ್ರದಲ್ಲಿ ಅಕ್ಕಿ ಚೆನ್ನಾಗಿದೆಯಪ್ಪಾ ಒಂದು ಬ್ಲಾಗ್ ತೆಗೆದುಕೊಂಡು ಬಾ ಎಂದು ಹೇಳುತ್ತಾನೆ. ಅವನು ರೆಫ್ಯೂಸ್ ಮಾಡುತ್ತಾರೆ, ಏಕೆಂದರೆ ಬಾರ್ಡರ್ ಚೆಕ್ ಇದೆ ಸಾರ್ ನಾನು ತರುವುದಿಲ್ಲವೆಂದು ಹೇಳುತ್ತಾರೆ. ಅವನನ್ನು ರೆಫ್ಯೂಸಲ್ ಆ್ಯಕ್ಟ್‌ನಲ್ಲಿ ಅರೆಸ್ಟ್ ಮಾಡುತ್ತೀರಾ? ಮ್ಯಾನೇಜರ್‌ಗೆ ಅಕ್ಕಿ ತೆಗೆದುಕೊಂಡು ಬಂದು ಕೊಟ್ಟರೆ ಮ್ಯಾನೇಜರ್‌ಗೆ ಇವನು ಒಬೇಡಿಯೆಂಟ್ ಸರ್ವೆಂಟ್. ಆದರೆ ಅವನು ತೆಗೆದುಕೊಂಡು ಬಂದು ಕೊಟ್ಟಿಲ್ಲವೆಂದರೆ, ಆ

ಡ್ರೈವರ್ ನನ್ನ ಮಾತಿಗೆ ಬೆಲೆ ಕೊಟ್ಟಿಲ್ಲ ಅಕ್ಕಿ ಕೇಳಿದೆ ಎಂದು ಬರೆಯುತ್ತಾನಾ? ಇಲ್ಲ, ಆಮೇಲೆ ಅವನು ಏನು ಬರೆಯುತ್ತಾನೆ ಎಂದರೆ "He has refused to work" ಎಂದು ಒಬ್ಬ ಪ್ಯಾಸೆಂಜರ್‌ನ ಕಂಪ್ಲೇಂಟ್ ಇಟ್ಟುಕೊಂಡು ಬರೆಯುತ್ತಾನೆ. ಪಾಪ, ಆ ಬಡವ ಎಲ್ಲಿ ಹೋಗುವುದು? ಅವನು ಯೂನಿಯನ್‌ಗೂ ಹೋಗುವುದಕ್ಕಾಗುವುದಿಲ್ಲ. ಈ ಬಿಲ್ ಸರಿಯಾಗಿದೆ. ಆದರೆ ಬಿಲ್‌ನಲ್ಲಿ ತಾವು ನಿಜವಾಗಲೂ ತಿದ್ದುಪಡಿ ಮಾಡಬೇಕು. ಏನೆಂದರೆ ಯಾವ ಆಫೀಸರ್ ಆಫೀಸ್‌ಗೆ ಹತ್ತು ಗಂಟೆಗೆ ಬಂದಿಲ್ಲ, bureaucrats who are not present in the office at 11 0'clock.. ಅವರನ್ನು ಫನ್ಸ್ ಅರೆಸ್ಟ್ ಮಾಡಬೇಕು, ಅದನ್ನು ಬಿಟ್ಟು ಬಡವ ಪಾಪ ಡ್ರೈವರ್ 9.30ಕ್ಕೆ ಬರುತ್ತಾನೆ, ಇವನನ್ನು ಅರೆಸ್ಟ್ ಮಾಡಿ ಎಂದರೆ ನ್ಯಾಯ ಎಲ್ಲಿದೆ? ಈ ಬಿಲ್‌ನಲ್ಲಿ ಪೊಲೀಸ್‌ನವರಿಗೆ ಅಡಿಷನಲ್ ಸಪೋರ್ಟ್ ಕೊಟ್ಟಿದ್ದೀರಿ. ಸುಮ್ಮನೆ ಪೊಲೀಸ್ ಆಟೋದಲ್ಲಿ ಹೋಗಿ ಅದಕ್ಕೆ ದುಡ್ಡು ಕೊಟ್ಟಿಲ್ಲವೆಂದು ಕೇಳಿದ್ದಕ್ಕೆ ಈಗ ಅರೆಸ್ಟ್ ಮಾಡುತ್ತಾನೆ. ಆಟೋ ಡ್ರೈವರ್‌ನ್ನು ಸಾರ್ ಒಂದೆರಡು ರೂಪಾಯಿ ಕೊಡಿ ಎಂದು ಕೇಳಿದರೆ, ನಾನು ಪೊಲೀಸ್, ನನ್ನನ್ನೇ ಎರಡು ರೂಪಾಯಿ ಕೇಳುತ್ತೀಯಾ. ಆಗ ಇವನು ಸ್ಪೀಡ್ ಆಗಿ ಹೋಗಿದ್ದಾನೆ ಎಂದು ಫೈನ್ ಹಾಕಿ ಒಳಗಡೆ ಹಾಕುತ್ತಾನೆ. ಅಂತಹವರಿಗೆ ನೀವು ಅಧಿಕಾರ ಕೊಟ್ಟರೆ, ಅವನು, ನನ್ನ ಮಕ್ಕಳನ್ನು ಕರೆದುಕೊಂಡು ಹೋಗಿ ಸ್ಕೂಲ್‌ಗೆ ಬಿಟ್ಟು ಬಾ ಎಂದು ಹೇಳುತ್ತಾನೆ. ಅವನು ಹೇಗೆ ಹೋಗುವುದಕ್ಕೆ ಆಗುತ್ತದೆ? ರೆಪ್‌ಯೂಸ್ ಮಾಡಿದ್ದಾನೆಂದು ಅವನನ್ನು ಅರೆಸ್ಟ್ ಮಾಡುತ್ತೀರಾ? ಈಗ ಪೊಲೀಸ್‌ನವರೆಲ್ಲಾ ಏನು ಮಾಡುತ್ತಿದ್ದಾರೆ? ಅವರ ಹೆಂಡತಿಗೆ ಆಟೋ ಕೊಡಬೇಕು, ಅವರ ಮಕ್ಕಳಿಗೆ ಆಟೋ ಕೊಡಬೇಕು. ಕೊಡಲಿಲ್ಲವೆಂದರೆ ಡ್ರೈವರ್ ಯೂನಿಫಾರಂ ಹಾಕಿಲ್ಲ. ಅವನು ಸ್ಪೀಡ್ ಆಗಿ ಹೋಗಿದ್ದಾನೆ ಎಂದು ತೊಂದರೆ ಕೊಡುತ್ತಾರೆ. ಎನಿ ಟ್ರಾನ್ಸ್‌ಪೋರ್ಟ್ ಎಂದು ಕೊಟ್ಟಿದ್ದೀರಿ, ನೀವು ಎನಿ ಟ್ರಾನ್ಸ್‌ಪೋರ್ಟ್ ಬದಲು ಗೌವರ್ನ್‌ಮೆಂಟ್ ಟ್ರಾನ್ಸ್‌ಪೋರ್ಟ್ ಎಂದು ಬರೆದಿದ್ದರೆ, ಪರವಾಗಿಲ್ಲ. ಎನಿ ಟ್ರಾನ್ಸ್‌ಪೋರ್ಟ್ ಎಂದು ಮಾಡಿದರೆ ಹೇಗೆ? ಆರ್‌ಟಿಓ ಆಫೀಸರ್ ಇದ್ದಾರೆ, ಪೊಲೀಸ್ ಅಧಿಕಾರಿ ಒಂದು ಮದುವೆಗೆ ಹೋಗಬೇಕೆಂದು ಟ್ಯಾಕ್ಸಿ, ಅಥವಾ ಬಸ್ಸನ್ನು ಕೇಳುತ್ತಾನೆ. ಆಗ ಪ್ರೈವೇಟ್ ಬಸ್‌ನವನು ಬರುವುದಿಲ್ಲ. ಆಗ ಇವನು ಆರ್‌ಟಿಓ ಗೆ ಹೇಳುತ್ತಾನೆ, ಬಸ್‌ನವನನ್ನು ಅರೆಸ್ಟ್ ಮಾಡಿ ಎಂದು. ಆರ್‌ಟಿಓ refuses to arrest that private man. ಏಕೆಂದರೆ ಆ ಬಸ್‌ನವರು ಅವನಿಗೆ ಕಮಿಷನ್ ಕೊಟ್ಟಿರುತ್ತಾನೆ.

ಅಂತಹ ಸಂದರ್ಭದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿ ಅರೆಸ್ಟ್ ಮಾಡುತ್ತಾನೆ? because this RTO has not obliged? ಹಾಗೇನಾದರೂ ಅರೆಸ್ಟ್ ಮಾಡಿದರೆ ಅನ್ಯಾಯವಲ್ಲವೆ? ತಾವು ಯೋಚನೆ ಮಾಡಿ. The Bill is good. ಎಲ್ಲಾ ಅಧಿಕಾರಿಗಳಿಗೂ ಈಕ್ವಲ್ ಆಗಿ ಮಾಡಿಬಿಡಿ ಸಿ.ಎಂ. ರವರೇ ಒಂದು ಅಧಿಕಾರಿಯನ್ನೂ ಬಿಡಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಎಂಎಲ್‌ಎಗಳು ಇಲ್ಲಿ ಅಬ್ಸೆಂಟ್ ಆದರೆ...

ಶ್ರೀ ಎಸ್.ರಾಜೇಂದ್ರನ್: ಎಂಎಲ್‌ಎಗಳಿಗೂ ಎಂದು ಅವರನ್ನು ಸೇರಿಸಿ ಮಾಡುವುದಕ್ಕಾಗುತ್ತದೆ? ಇದು ಒಳ್ಳೆಯ ಕತೆ ಇದೆ, ಎಂಎಲ್‌ಎ ಗಳಿಗೂ ಮಾಡಿದರೆ ಸಿಎಂ ಗೂ ಸೇರಿಸಿ ಮಾಡಬೇಕು ಆಗುತ್ತದಾ? ಎಂಎಲ್‌ಎ ಆದರೆ ಸಿಎಂ ಆಗೋದು. Today's MLA is tomorrow's CM; yesterday's CM is today MLA. ಒಳ್ಳೆಯ ಕತೆ ಇದೆ ಇದು. ಆ ರೀತಿ ಇಲ್ಲ. ಮಾನ್ಯ ಅಧ್ಯಕ್ಷರೆ, ತಾವು ಯೋಚನೆ ಮಾಡಿ ಬಿಲ್ ತೆಗೆದುಕೊಂಡು ಬಂದಿದ್ದಾರೆ. ಅದನ್ನು ಒಳ್ಳೆಯ ಉದ್ದೇಶದಿಂದ ತೆಗೆದುಕೊಂಡು ಬಂದಿದ್ದಾರೆ. ಅದನ್ನು ಒಳ್ಳೆಯ ಉದ್ದೇಶದಿಂದ ತೆಗೆದುಕೊಂಡು ಬಂದಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳು ಇಂತಹವರಿಗೆ ಮಾತ್ರ ಹಾಕಿಬಿಡಿ ಎಂದು ಹೇಳಿದ್ದಾರೆ. ಯಾವುದು ಎಸೆನ್ಸಿಷಿಯಲ್ ಇಲ್ಲ; ಯಾವುದು ಎಸೆನ್ಸಿಷಿಯಲ್ ಇಲ್ಲ ಅಂತಹ ಡಿಪಾರ್ಟ್‌ಮೆಂಟ್‌ಗೆ ಮಂತ್ರಿಯನ್ನು ಕೊಡಬಾರದು. ಯಾವುದು ಎಸೆನ್ಸಿಷಿಯಲ್ ಇಲ್ಲ? ಹಾರ್ಟಿಕಲ್ ಎಸೆನ್‌ಶಿಯಲ್ ಇಲ್ಲವೆ? ಟೋಮೋಟೋ ಬೆಳೆದಿರುವವರು ಗಲಾಟೆ ಮಾಡುತ್ತಿದ್ದಾರೆ, ಟೊಮ್ಯಾಟೋ ಇಲ್ಲವೆಂದರೆ ಸಾರು ಸರಿ ಇರುವುದಿಲ್ಲ. ಈ ದೇಶದಲ್ಲಿ ಯಾವುದು ಎಸೆನ್‌ಶಿಯಲ್ ಇಲ್ಲ? ಎಲ್ಲಾ ಎಸೆನ್‌ಶಿಯಲ್ ಸ್ವಾಮಿ. ಆದುದರಿಂದ ನಾನು ಈ ಬಿಲ್‌ಗೆ ಪೂರ್ತಿ ಬೆಂಬಲ ಕೊಡುತ್ತೇನೆ. ಬಿಲ್ ತಂದಿರುವುದು ಏನೂ ತಪ್ಪಿಲ್ಲ. But it should include all the officers. ಸೆಕ್ರೆಟರಿ, ಜಾಯಿಂಟ್ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿ ಮತ್ತು ನೆಕ್ಷನ್ ಆಫೀಸರ್ಸ್ ಎಲ್ಲಾ ಇದರಲ್ಲಿ ಬರಬೇಕು ಕೊನೆಗೆ ಯಾರು ಸಿಕ್ಕಿಹಾಕಿಕೊಳ್ಳುವುದು ಕೇಸ್ ವರ್ಕರ್. ಎಲ್ಲಿದೆ ನ್ಯಾಯ ಸ್ವಾಮಿ? ತಿಂಗಳುಗಟ್ಟಲೆ ಈ ಅಧಿಕಾರಿಗಳು ತಪ್ಪು ಮಾಡಿ ಫೈಲುಗಳನ್ನು ಹಾಗೆ ಇಟ್ಟುಕೊಳ್ಳುವುದು. ಆದರೆ ಕೆಲಸ ಸರಿಯಾಗಿ ಮಾಡಲಿಲ್ಲವೆಂದು ಕೇಸ್ ವರ್ಕರ್ ಅನ್ನು ನೀವು ಅರೆಸ್ಟ್ ಮಾಡುತ್ತೀರಾ? ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿ. ಎಲ್ಲಾ ಅಧಿಕಾರಿಗಳಿಗೆ

ಅನ್ವಯಿಸುವಂತೆ ಈ ಬಿಲ್ ಪಾಸ್ ಮಾಡಿದರೆ you will be a number one chief Minister in the country. please do that.

ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಈ ಬಿಲ್ ತರುವುದಕ್ಕೆ cause of action ಏನು ಎಂದು ಬಂದು ನನಗೆ ಗೊತ್ತಾಗಲಿಲ್ಲ. ಈಗ ಯಾವ ಕಾರಣಕ್ಕಾಗಿ ತಾವು ಈ ಬಿಲ್ ಅನ್ನು ತಂದಿದ್ದೀರಿ? ಇತ್ತೀಚಿನ ದಿನಗಳಲ್ಲಿ ನಾವು ಯಾವುದೇ ಎಜ್‌ಟೇಷನ್ ಅನ್ನು ಕಂಡಿಲ್ಲ. ಅದು ಯಾವುದೇ ಇಲಾಖೆಯಲ್ಲಾಗಲಿ; ಇಲಾಖೆಯಲ್ಲಿ ಕೆಲಸ ಮಾಡುವುದಿಲ್ಲ ಎನ್ನುವುದು ಒಂದು ಕಡೆ ಇರಲಿ. ಅದಕ್ಕೆ ಏನಾದರೂ ಮಾಡುತ್ತೀರಾ? ನೀವು ಎಜ್‌ಟೇಷನ್ ಮಾಡಿದರೆ ಎಂದು ಈ ಒಂದು ಬಿಲ್ ಅನ್ನು ತಂದಿದ್ದೀರಿ. ಆದರೆ ಇತ್ತೀಚಿನ ಒಂದು ಉದಾಹರಣೆಯನ್ನು ಕೊಡಿ, ಎಲ್ಲಿಯಾದರೂ ಜಲಮಂಡಲಿಯಲ್ಲಾಗಲಿ, ಪವರ್ ಕಾರ್ಪೊರೇಷನ್‌ನಲ್ಲಾಗಲಿ, ಎಜ್‌ಟೇಷನ್ ಆಗಿರುವುದನ್ನು ತೋರಿಸಿದರೆ ಇದರ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅಗತ್ಯವಿರುತ್ತಿತ್ತು. ಏನೂ cause of action ಇಲ್ಲದೆ ಈ ಒಂದು ಬಿಲ್ ಎಸೆನ್‌ಶಿಯಲ್ ಸರ್ವಿಸಸ್‌ನಲ್ಲಿ ತಂದದ್ದು ಏಕೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಮೊದಲೇ ಪ್ರಿವೆಂಟೀವ್ ಆ್ಯಕ್ಷನ್ ತೆಗೆದುಕೊಳ್ಳುವುದಾದರೆ ಮಾನ್ಯ ರಾಜೇಂದ್ರನ್ ರವರು ಹೇಳಿದ ಹಾಗೆ ಎಲ್ಲರನ್ನೂ ಸೇರಿಸಬೇಕಾಗುತ್ತದೆ. ಅದಕ್ಕೆ ನಾನು ಒಪ್ಪುತ್ತೇನೆ. ಪ್ರಿವೆಂಟೀವ್ ಆ್ಯಕ್ಷನ್ ತೆಗೆದುಕೊಳ್ಳಿ. ಪ್ರಿವೆಂಟೀವ್ ಆ್ಯಕ್ಷನ್ ತೆಗೆದುಕೊಳ್ಳುವುದಾದರೆ, ಯಾವ್ಯಾವ ಇಲಾಖೆಯಲ್ಲಿ ತೆಗೆದುಕೊಳ್ಳಬೇಕು ಅದನ್ನೆಲ್ಲಾ ಸೇರಿಸಬೇಕಾಗುತ್ತದೆ. ಇವೆಲ್ಲಾ ಸೆವೆನ್ತ್ ಶೆಡ್ಯೂಲ್‌ನಲ್ಲಿ ಇದೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಇದನ್ನು ಎಷ್ಟು ಸಮಯಕ್ಕೆ ಎಂದು ತಂದಿದ್ದೀರಿ? ಎಲ್ಲಿಯಾದರೂ ಒಂದು ಎಜ್‌ಟೇಷನ್ ಪ್ರಾರಂಭವಾದಾಗ ಇಷ್ಟು ದಿವಸದವರೆಗೆ ಎಸೆನ್‌ಶಿಯಲ್ ಸರ್ವೀಸಸ್ ಎಂದು ತರುವುದು ಒಂದು.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಇದನ್ನು ಎಸೆನ್‌ಶಿಯಲ್ ಆ್ಯಕ್ಟ್ ಕೆಳಗಡೆ ತರಬೇಕಾದರೆ ಪರ್ಮನೆಂಟಾಗಿ ಎಸೆನ್‌ಶಿಯಲ್ ಎಂದು declare ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ the Seventh Schedule of the Constitution has declared which are the essential services. ಅಂತ ಹೇಳಿ ಆಗುತ್ತದೆ. ಆಕಸ್ಮಾತ್ ಸರ್ಕಾರ ಯಾವುದಾದರೂ ಎಸೆನ್‌ಶಿಯಲ್ ಎಂದು ತರಬೇಕಾದರೆ ಅದನ್ನು ಸರ್ಟನ್ ಪೀರಿಯಡ್ ವರೆಗೆ ತರಬಹುದು ಅಷ್ಟೆ. It cannot be made a permanent Act. –ಯಾವುದಾದರೂ ಒಂದು ವಿಚಾರವನ್ನು ಕೆಲವು

ಸಮಯದವರೆಗೂ ಎಸೆನ್‌ಶಿಯಲ್ ಎಂದು ತರಬಹುದು ಅಷ್ಟೆ. ಪರ್ಮನೆಂಟಾಗಿ ಅದರ ಬಗ್ಗೆ ನಿಷೇಧ ಮಾಡಿ ಆ್ಯಕ್ಟ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಇದು infringement of fundamental rights ಆಗುತ್ತದೆ. ದಯವಿಟ್ಟು ಇದರ ಬಗ್ಗೆ ಮರುಪರಿಶೀಲನೆಯನ್ನು ಮಾಡಿ. ಇದನ್ನು ಏತಕ್ಕಾಗಿ ತಂದಿದ್ದೀರಿ? ಇದನ್ನು ಎಷ್ಟು ಸಮಯದವರೆಗೆ ಹಾಗೂ ಯಾವ ಕಾರಣಕ್ಕೆ ತಂದಿದ್ದೀರಿ? ಎಲ್ಲಿ ಎಜ್‌ಟೇಷನ್ ಇದೆ? ಇದರ ಬಗ್ಗೆ ಎಲ್ಲಾ ವಿವರಣೆಯನ್ನು ಸದನಕ್ಕೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಇಡೀ ಪ್ರಪಂಚದಲ್ಲೇ ಮಿಖಾಯಿಲ್ ಗೊರ್ಬಚೇವ್ ಅವರದ್ದು "Perestroika" and "Glasnost" ಏನು ಪ್ರಾರಂಭವಾಗಿ ಅವರನ್ನು ಅಹುತಿ ತೆಗೆದುಕೊಂಡಿತು ಅಲ್ಲಿಂದ ಆಚೆಗೆ ಪ್ರಪಂಚದಲ್ಲಿ ಎಲ್ಲೂ ಎಜ್‌ಟೇಷನ್ ಇಲ್ಲ. It is different trend altogether. ಅದಾದ ಮೇಲೆ ಡಂಕಲ್ ಪ್ರಪೋಸಲ್ಸ್, ಲಿಬರಲೈಸೇಷನ್ ಅಪ್ರೋಚ್ ಎಲ್ಲಾ ಆಯಿತು. ಮಾನ್ಯ ಜಯಪ್ರಕಾಶ್ ರವರು ಹೇಳಿದ ಹಾಗೆ ಕಂಪಲ್‌ಷನ್ ಏನಿತ್ತು ಎಂಬುದು ಗೊತ್ತಿಲ್ಲ. ರೀಸೆಂಟ್ ಪಾಸ್ಟ್‌ನಲ್ಲಿ ಅಂತಹದೇನಾದರೂ ಮಿಸರೇಬಲ್ ಎಕ್ಸ್‌ಪೀರಿಯೆನ್ಸ್ ಆಗಿತ್ತು ಅದರ ಹಿನ್ನೆಲೆಯೊಳಗೆ ಇದನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದರೆ ಅರ್ಥ ಮಾಡಿಕೊಳ್ಳಬಹುದಾಗಿತ್ತು. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾರು ಇದನ್ನು ರೂಪಿಸಿದರೋ ಗೊತ್ತಿಲ್ಲ. ನಾರ್ಮಲ್ ಕೋರ್ಸ್‌ನಲ್ಲಿ ಆರೋಗ್ಯಕರವಾದಂತಹ ಮನಸ್ಸು ಇರತಕ್ಕಂಥವರು ಯಾರೂ ಕೂಡ ಈ ತರಹದ ಬಿಲ್‌ನ ಡ್ರಾಫ್ಟ್ ಮಾಡುವುದಿಲ್ಲ, ಪ್ರಪೋಸಲ್ ಕೂಡ ಮಾಡುವುದಿಲ್ಲ. ಇದು ಹಿಟ್ಲರ್ ಕಾಲಕ್ಕೆ ಸರಿಹೋಗುತ್ತದೆ. ನಾವು ಈ ಕಾಲದಲ್ಲಿ ಈ ರೀತಿಯ ಬಿಲ್ ತರತಕ್ಕಂಥಾದ್ದು ನಮ್ಮ ವ್ಯವಸ್ಥೆಗೇ ದೊಡ್ಡ ಅಪಮಾನ ಅನ್ನಿಸುತ್ತದೆ. ಆರೋಗ್ಯಕರವಾದಂತಹ ಮನಸ್ಥಿತಿ ಇರುವಂತಹವರು ಯಾರೂ ಇದನ್ನು ಹೇಳುವುದಿಲ್ಲ. ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಸೆಕ್ಷನ್ 2 ಮತ್ತು 3 ನೋಡಿ, ಪವರ್ ಮತ್ತು ವಾಟರ್ ಎಂದು ಹೇಳಿಬಿಟ್ಟು ಮುಂದೆ ಜನರಲ್ ಎಕ್ಸ್‌ಟೆನ್‌ಷನ್ ತೆಗೆದುಕೊಂಡು ಬಿಟ್ಟಿದ್ದಾರೆ. ಕಾನ್ಸ್‌ಟೆಟ್ಯೂಷನ್‌ನಲ್ಲಿ ಸೆವೆನ್ತ್ ಶೆಡ್ಯೂಲ್‌ಗೆ ಸ್ಟೇಟ್ ಲಿಸ್ಟ್‌ನಲ್ಲಿ ಬರುವಂತಹ ಯಾವುದಕ್ಕೆ ಬೇಕಾದರೂ

ತೆಗೆದುಕೊಂಡು ಹೋಗಬಹುದು ಎಂದು ಹೇಳಿದ್ದೀರಿ. ಏಕೆ ಈ ತರಹದ ದುರಾಲೋಚನೆಗಳು ಇವರಿಗೆ ಬರುತ್ತವೆ? ಯಾವ ಪುಣ್ಯಾತ್ಮರು ಇವರಿಗೆ ಕೊಡುತ್ತಾರೆ? ಅವರಿಗೆ ಏನು ಮನುಷ್ಯತ್ವದ ಅಂಶ ಇರುತ್ತದೋ ಇಲ್ಲವೋ? ಕೆಪಿಟಿಸಿಎಲ್ ಒಳಗೆ ನಾವು ಇನ್‌ವೆಂಟ್ರಿ ಒಂದು ತೆಗೆದುಕೊಳ್ಳೋಣ. ಯಾವ್ಯಾವ ದೊಡ್ಡ ಮನುಷ್ಯರು ಐಎಎಸ್ ಆಫೀಸರ್ ಅಲ್ಲಿ ಚೇರ್‌ಮನ್ ಆಗಿದ್ದಾಗ, ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ ಎಷ್ಟೆಷ್ಟು ಇನ್‌ವೆಂಟ್ರಿ ತಂದಿದ್ದಾರೆ, ಅದು ಕೆಲಸಕ್ಕೆ ಬಾರದೆ ಮೂಲೆಗೆ ಬಿದ್ದಿದೆ. ಅದಕ್ಕೆ ಎಷ್ಟೆಷ್ಟು ಕೋಟಿ ರೂಪಾಯಿಯಾಗುತ್ತದೆ? ಫಸ್ಟ್ ಅವರದ್ದು ಒಂದು ಲಿಸ್ಟ್ ಮಾಡಿ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿಸಿ ಬೇಲ್ ಸಿಗದ ಹಾಗೆ ಮಾಡಿ ಸೆಂಟ್ರಲ್ ಜೈಲಿಗೆ ಕಳುಹಿಸಿ. ಆಮೇಲೆ ಅದನ್ನು ಯುನಾನಿಮಸ್ ಆಗಿ ಪಾಸ್ ಮಾಡಿ. ಯಾವನೋ ಡ್ರೈವರ್, ಕಂಡಕ್ಟರ್ ರಿಕ್ಷಾ ಓಡಿಸುವವನು, ಯಾವನೋ ವಾಟರ್ ಮ್ಯಾನ್ ನೀರು ಬಿಡುವವನು ಅವರಿಗೆ ಮಾಡಿದರೆ ಹೇಗೆ? ದಯಮಾಡಿ ನೋಡಿ ನಿಮಗೆ ಒಳ್ಳೆಯದಾಗಿದೆ. ಬದುಕಿನಲ್ಲಿ ಬಹಳ ಒಳ್ಳೆಯ ಸ್ಥಾನಕ್ಕೆ ಚಿಕ್ಕ ವಯಸ್ಸಿನಲ್ಲಿ ಬಂದಿದ್ದೀರಿ. ಇಂತಹ ಅಪಕೀರ್ತಿಗೆ ನೀವು ಪಾಲಾಗಬೇಡಿ. ಯಾರು ಇದನ್ನು ಹೇಳಿದ್ದಾರೆ ಅವರನ್ನು ಕರೆದು ಅವರಿಗೆ ಛೀಮಾರಿ ಹಾಕಿ ಭದ್ರ ಹುಷಾರು ನಾನು ಅಧಿಕಾರದಲ್ಲಿರುವವರಿಗೂ ಇಂತಹ ಕಾಗದಗಳನ್ನು ತರಬೇಡಿ ಎಂದು ಅವರ ಮುಖಕ್ಕೆ ಹೊಡೆದು ಕಳುಹಿಸಿ ದಯವಿಟ್ಟು. ನಿಮಗೆ ಒಳ್ಳೆಯದಾಗುತ್ತದೆ.

ಶ್ರೀ ಎ. ಕೃಷ್ಣಪ್ಪ (ವರ್ತೂರು): ಮಾನ್ಯ ಅಧ್ಯಕ್ಷರೆ, ಪ್ರಾರಂಭದಲ್ಲಿ "Any services connected with production" ಎಂದು ಹೇಳಿದ್ದಾರೆ. ಇದರ ಬಗ್ಗೆ ಡಿಫೈನ್ ಮಾಡಬೇಕಲ್ಲಾ, ಏನು ಪ್ರೊಡಕ್ಷನ್ ಎಂದು. ಫುಡ್ ಪ್ರೊಡಕ್ಷನಾ? ಮಿಲ್ಕ್ ಪ್ರೊಡಕ್ಷನಾ? ಪ್ರೋಸೆಸಿಂಗ್ ಇಂಡಸ್ಟ್ರೀಸ್‌ನಾ? ಇಂಜಿನಿಯರಿಂಗ್ ಇಂಡಸ್ಟ್ರೀನಾ? ಕಮ್ಯುನಿಕೇಷನ್ ಇಂಡಸ್ಟ್ರೀನಾ? ಯಾವುದು ಪ್ರೊಡಕ್ಷನ್ ಎಂದು ಹೇಳಿ. ಮಾನ್ಯ ಅಧ್ಯಕ್ಷರೆ, ಎಸೆನ್‌ಶಿಯಲ್ ಸರ್ವೀಸ್‌ನಲ್ಲಿ ನಾವು ನೋಡಿದ್ದು ಕೆ.ಎಂ.ಎಫ್ ಒಂದು ನಮ್ಮ ರಾಜ್ಯ ಸರ್ಕಾರದ ಮಿತಿಯಲ್ಲಿ ನಡೆಯುತ್ತಿರುವಂತಹ most sensitive service institution KMF ಇಷ್ಟು ವರ್ಷಗಳಲ್ಲಿ ಸ್ಟ್ರೈಕ್ ಮಾಡಿದ್ದಾರೆ, ಅದಕ್ಕಾಗಿ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಈ ಮೂವತ್ತು ವರ್ಷಗಳ ಸಾರ್ವತ್ರಿಕ ಜೀವನದಲ್ಲಿ ನಾನು ನೋಡಿಲ್ಲ. ಮಾನ್ಯ ಕುಮಾರಸ್ವಾಮಿಯವರು ನೋಡಿದ್ದಾರಾ ಅಥವಾ ಕುಮಾರ ಸ್ವಾಮಿಯವರ ಎಮರ್ಜೆನ್ಸಿ ಎರಾ ಎಂದು ಈ ಬಿಲ್ಲನ್ನು ಏನಾದರೂ ತೆಗೆದುಕೊಂಡು

ಬಂದಿದ್ದಾರಾ? ಇದರ ಬಗ್ಗೆ ಎಕ್ಸ್‌ಪ್ಲೈನ್ ಮಾಡಬೇಕಾಗುತ್ತದೆ. ಪೊಲೀಸ್‌ನವರು ಈಗಲೇ ಮಾಡುತ್ತಿರತಕ್ಕಂಥ ದಬ್ಬಾಳಿಕೆಗಳನ್ನು ಸಾರ್ವಜನಿಕರು ತಡೆದುಕೊಳ್ಳುವುದಕ್ಕಾಗುತ್ತಿಲ್ಲ. ಇನ್ನು ಮುಂದೆ this ultimately amounts to curbing of trade union activity in the country and the state. ಇದಕ್ಕೆ ನಮ್ಮ ರಾಜ್ಯ ಸರ್ಕಾರದ ಮುಖ್ಯಮಂತ್ರಿಯವರು ಚಾಂಪಿಯನ್ ಆಗುವುದು ಬೇಡ. ಏಕೆಂದರೆ, ಎಮರ್ಜೆನ್ಸಿ ಡೇಸ್‌ನಲ್ಲಿ ನಾವು ಹ್ಯೂಮನ್ ರೈಟ್ಸ್ ಬಗ್ಗೆ, ಇಂಡಿವಿಜುಯಲ್ ರೈಟ್ಸ್ ಬಗ್ಗೆ, ಫಂಡಮೆಂಟಲ್ ರೈಟ್ಸ್ ಬಗ್ಗೆ, ಟ್ರೇಡ್ ಯೂನಿಯನ್ ರೈಟ್ಸ್ ಬಗ್ಗೆ ಏನೇನು ಮಾತನಾಡಿದ್ದೇವೆ ಎಂದು ನಮಗೆಲ್ಲಾ ಹಸಿರಾಗಿ ಜ್ಞಾಪಕವಿದೆ. ಅಂಥ ಒಂದು ಇತಿಹಾಸವನ್ನು ನಾವು ಕಂಡಾಗ, "Services connected with production" --

ಅದು ಏನು ಪ್ರೊಡಕ್ಷನ್ ಬೇಕಾದರೂ ಆಗಬಹುದು. ತಲೆಯ ಕೂದಲಿರುವ ಹೆಂಗಸು ಹೇಗೆ ಬೇಕಾದರೂ ಕ್ರಾಪ್ ಮಾಡಿಕೊಳ್ಳಬಹುದು; ಹಾಗೆ ಇವರು ಕಾನೂನನ್ನು ತಮ್ಮ ವಶದಲ್ಲಿಟ್ಟುಕೊಳ್ಳಲಿಕ್ಕೆ ಎನಿ ಪ್ರೊಡಕ್ಷನ್ ಎಂದು ಹೇಳಿದ್ದಾರೆ. Tomorrow it can be a production-oriented industry. ಅದು ಗಾರ್ಮೆಂಟ್ಸ್ ಆಗಬಹುದು, ಟೆಕ್ಸ್‌ಟೈಲ್ ಇಂಡಸ್ಟ್ರಿಯಾಗಬಹುದು, ಸೀಡ್ಸ್ ಪ್ರೊಡಕ್ಷನ್ ಆಗಬಹುದು ಅಥವಾ ಇನ್ನಾವುದೇ ಫುಡ್ ಪ್ರೊಡಕ್ಷನ್ ಆಗಬಹುದು. ಕರ್ನಾಟಕ ರಾಜ್ಯದಲ್ಲಿ ಇಂಥ ಒಂದು ಶಾಂತಿಯ ವಾತಾವರಣವನ್ನು ಇಟ್ಟುಕೊಂಡು ಬಂದಿರುವಂಥ ಕಾರ್ಮಿಕರ ಗುಂಪುಗಳು, ಕಾರ್ಮಿಕ ನಾಯಕರುಗಳ ಮೇಲೆ ಗದಾಪ್ರಹಾರ ಮಾಡುವಂಥ ಕೆಲಸವನ್ನು ಏನು ಪ್ರಾರಂಭ ಮಾಡಿದ್ದಾರೆ, ಇದು ಈ ಸರ್ಕಾರಕ್ಕೆ, ಈ ಮುಖ್ಯಮಂತ್ರಿಗಳಿಗೆ ಶೋಭೆ ತರುವಂಥ ವಿಚಾರವಲ್ಲ. This is nothing but withdrawing the right that is available under the Constitution of India. ಇನ್ನು ಮುಂದಕ್ಕೆ ನಾನು ಹೋಗುವುದಿಲ್ಲ. ಹೇಗೇಗೆ ಫೆನಾಲ್ಟಿ ಹಾಕಬಹುದು ಎಂದು ಹಲವಾರು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. Penalty for instigation. -- ತಮಗೂ ಕೂಡ ಅನುಭವವಾಗಿರಬಹುದು, ಎಲ್ಲೆಲ್ಲಿ ಟ್ರೇಡ್ ಯೂನಿಯನ್‌ಗಳನ್ನು, ವರ್ಕ್ ಫೋರ್ಸ್‌ಗಳನ್ನು ಹತ್ತಿಕ್ಕಬೇಕೋ ಅಲ್ಲಿ ಮೇನೇಜ್‌ಮೆಂಟ್‌ನವರೇ ಫಂಡ್ ಮಾಡಿ, ಫೈನಾನ್ಸ್ ಮಾಡಿ ಅವರಲ್ಲಿ ಗುಂಪುಗಳನ್ನು ಕ್ರಿಯೇಟ್ ಮಾಡುತ್ತಾರೆ. ತಮಗೆ ಗೊತ್ತಿರಬಹುದು, ರೈವಲ್ರಿ ಟ್ರೇಡ್, ಯೂನಿಯನ್ಸ್ ಹೇಗೆ ಇವತ್ತು ಕಾರ್ಖಾನೆಗಳಲ್ಲಿ, ಸಂಘ ಸಂಸ್ಥೆಗಳಲ್ಲಿ

ಉಳಿದಿದೆ ಎಂಬುದು ಗೊತ್ತಿರಬಹುದು. ಅಂಥಾದ್ದನ್ನು ಮೇನೇಜ್‌ಮೆಂಟ್‌ನವರೇ ಕೊಲಾಬರೇಟ್ ಮಾಡುತ್ತಾರೆ. ಆಗ ದಂಡ ಹಾಕುವುದು ಯಾರಿಗೆಂದರೆ, ಯಾರಾದರೊಬ್ಬ ನಮ್ಮಂಥ ಯೂನಿಯನ್ ಪ್ರತಿನಿಧಿಯೋ, ಒಬ್ಬ ಎಂ ಎಲ್ ಎ ನೋ, ಅಥವಾ ಆ ಸಂಘದಲ್ಲಿರುವಂಥ ಒಬ್ಬ ಪದಾಧಿಕಾರಿಗೆ ಈ ವಿಚಾರವನ್ನು ಕೇಳಿದಾಗ ಅವನಿಗೆ ನೇರವಾಗಿ ನಾವು ಜುಲ್ಮಾನೆ ಹಾಕಬಹುದು, ಪೊಲೀಸ್ ಕ್ರಮ ತೆಗೆದುಕೊಳ್ಳಬಹುದು, ಮುಲಾಜೇ ಇಲ್ಲದೇ ಜೈಲಿಗೆ ಕಳುಹಿಸಬಹುದು ಎಂದು ಇಲ್ಲಿ ಉಲ್ಲೇಖ ಮಾಡುತ್ತಾರೆ. Penalty for illegal refusal of work - ಆಗಲೇ ಮಾನ್ಯ ರಾಜೇಂದ್ರನ್‌ರವರು ಹೇಳಿದರು, ಆಟೋರಿಕ್ಷಾದಲ್ಲಿ ಡ್ರಾಪ್ ಮಾಡಿ ಎಂದು ಹೇಳುತ್ತಾರೆ, ಮಾಡುವುದಿಲ್ಲ ಎಂದಾಗ ಅದನ್ನೂ ದುರುಪಯೋಗ ಮಾಡಿಕೊಳ್ಳಬಹುದು. ಪ್ರತಿಯೊಂದು ಸಂಸ್ಥೆಯಲ್ಲೂ ಪ್ರತಿಯೊಬ್ಬರಿಗೂ ಜಾಬ್ ಡಿಸ್ಟ್ರಿಬ್ಯೂಷನ್ ಎಂದು ಕೊಟ್ಟಿರುತ್ತಾರೆ. ಅದನ್ನು ಹೊರತುಪಡಿಸಿ, ಬೇರೆ ಏನಾದರೂ ಕೆಲಸ ಕೊಟ್ಟಾಗ, ಅದನ್ನು ನಾನು ಮಾಡುವುದಿಲ್ಲವೆಂದು ಹೇಳಿದಾಗ ಅದಕ್ಕೂ ಕೂಡ ವರ್ಕ್ ರೆಫ್ಯೂಸಲ್ ಎಂದು ಕೇಸ್ ಬುಕ್‌ಮಾಡಬಹುದು; ಫೆನಾಲ್ಟಿ ಹಾಕಬಹುದು. ಹಾಗೆಂದು ಇಲ್ಲಿದೆ ನೋಡಿ, Any person who without reasonable excuse ….. What is reasonable excuse? ಅದನ್ನು ಎಕ್ಸ್‌ಪ್ಲೈನ್ ಮಾಡಬೇಕಲ್ಲವೇ I can give any kind of interpretation to the word "reasonable excuse," "illegal refusal" The Bill provides for punishment for illegal refusal. It says "Punishment could be imprisonment for a term which may be extended to one year and above or fine of Rs. 2000 or both. ಎರಡೂ ಆಗಬಹುದು ಎಂದು ಹೇಳುತ್ತಾರೆ. ಒಂದು ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಲಿ ಕೆಲಸ ಮಾಡುವಂಥ ಯಾರೋ ಒಬ್ಬ ಕ್ಲಾಸ್–4 ಸರ್ವೆಂಟ್ ಈ ರೀತಿಯಾದಂಥ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡರೆ, ಅವನನ್ನು ಜೈಲಿಗೂ ಕಳುಹಿಸುತ್ತೇನೆ, ಜುಲ್ಮಾನೆಯನ್ನೂ ಹಾಕುತ್ತೇನೆ ಎನ್ನುವಂಥ ಪವರ್ಸ್‌ಅನ್ನು ಇವರು ಇವತ್ತು ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. The powers that are so available today or vested with the concerned departmental heads are sufficiently satisfactory and we have continued with this kind of rules for the long 58 years. ಸುಮಾರು 58–60 ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ಈ ಕಾನೂನುಗಳನ್ನು ಇಟ್ಟುಕೊಂಡು ನಾವು ಸುಖವಾಗೇ

ಬಾಳಿದ್ದೇವೆ, ಶಾಂತಿಯಾಗೇ ಬಾಳಿದ್ದೇವೆ, ಆ ಕಾರ್ಖಾನೆಗಳಲ್ಲಿ ಸಮೃದ್ಧಿಯನ್ನೂ ಕೂಡ ಕಂಡಿದ್ದೇವೆ. ಅಂಥ ಒಂದು ಅನುಭವ ಈ ರಾಜ್ಯದಲ್ಲಿದ್ದಾಗ, ಏನೋ ಒಂದು ಕಾಲಕ್ಕೆ ವೆಸ್ಟ್ ಬೆಂಗಾಲ್‌ನಲ್ಲಿ ಕಲ್ಕತ್ತಾದಲ್ಲಿ ಆಗಿರಬಹುದು, ಕೇರಳ ರಾಜ್ಯದಲ್ಲಿ ಆಗಿರಬಹುದು. ಆದರೆ ಕರ್ನಾಟಕ ರಾಜ್ಯದಲ್ಲಿನ ನಮ್ಮ ಸಂಸ್ಕೃತಿ, ನಮ್ಮ ಇತಿಹಾಸ, ನಮ್ಮ ಪರಂಪರೆಗಳನ್ನು ಅವಲೋಕನ ಮಾಡಿದಾಗ ಇದು ಬಹಳ ಕ್ರೂರವಾದ, ಡಿಕ್ಟೋರಿಯಲ್ ಆ್ಯಕ್ಟ್‌ನ್ನು ಇವತ್ತು ನಮ್ಮ ಜನಗಳ ಮೇಲೆ ಇಂಪೋಸ್ ಮಾಡಿದ ಹಾಗೆ ಆಗುತ್ತದೆ. Our Hon'ble Chief Minister shall not become a party and champion to introduce this crude legislation in the state of Karnataka. This is my honest submission to you.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು): ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಹಿರಿಯ ಸದಸ್ಯರು ಈ ಕಾಯಿದೆಯ ಬಗ್ಗೆ ಇಲ್ಲಿ ಸವಿಸ್ತಾರವಾಗಿ ಹೇಳುತ್ತಿದ್ದಾರೆ. ತಾವು ಈ ಅಧಿವೇಶನವನ್ನು ನಡೆಸುವಾಗ, ಎಲ್ಲಾ ಅಧಿಕಾರಿಗಳು ಬೆಳಗ್ಗೆ 10 ಗಂಟೆಗೆ ಬರಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೀರಿ. ಇವರೆಲ್ಲಾ ಯಾರು ಇಲ್ಲಿಗೆ ಬರದಿದ್ದರೆ ಈ ಸದನ ನಡೆಯಲಿಕ್ಕೆ ಸಾಧ್ಯವೇ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಇದೆಯೋ, ಇಲ್ಲವೋ ಎಂದು ಕೇಳುವಂಥ ಪರಿಸ್ಥಿತಿ ಬರುತ್ತದೆ. ಈ ಒಂದು ಕಾಯಿದೆ ಇದೆ, ಇದನ್ನು ನಾವು ಉಲ್ಲಂಘನೆ ಮಾಡಬಾರದು ಎನ್ನುವ ಉದ್ದೇಶದಿಂದ ಎಲ್ಲಾ ಇಲಾಖೆಯ ಅಧಿಕಾರಿಗಳು ಈ ಸದನಕ್ಕೆ ಬರುತ್ತಾರೆ. ಎಸ್ಮಾ ಕಾಯಿದೆಯಿಂದ ಎಷ್ಟು ತೊಂದರೆಯಾಗುತ್ತಿದೆ ಎನ್ನುವುದನ್ನು ನಮ್ಮ ಸ್ನೇಹಿತರು ಹೇಳಿದರು. ಪೊಲೀಸರ ಬಗ್ಗೆ ಬಹಳ ಕೆಳಮಟ್ಟದಲ್ಲಿ ಮಾತನಾಡುವುದು ಎಲ್ಲರಿಗೂ ರೂಢಿಯಾಗಿದೆ. ಏಕೆಂದರೆ, ಎಲ್ಲೆಲ್ಲಿ ಪೊಲೀಸರಿಗೆ ಬಯ್ಯುತ್ತಾರೋ, ಅಲ್ಲೆಲ್ಲಾ ಓಟು ಜಾಸ್ತಿಯಾಗತ್ತದೆ ಎನ್ನುವ ಭಾವನೆ ಜನರಲ್ಲಿ ಇದೆ. ಪೊಲೀಸರು ಇಲ್ಲವೆಂದರೆ, ಒಂದು ದಿವಸ ಪೊಲೀಸರು ಈ ರಾಜ್ಯದಲ್ಲಿ ಸ್ಟ್ರೈಕ್ ಮಾಡಿದರೆ ಯಾರೂ ಈ ವಿಧಾನಸಭೆಗೆ ಬರುವುದಕ್ಕೇ ಸಾಧ್ಯವಿಲ್ಲ, ಅತಿ ಗಣ್ಯ ವ್ಯಕ್ತಿಗಳಿಗೆ ರಕ್ಷಣೆಯೇ ಇರುವುದಿಲ್ಲ, ಅವರು ಈ ವಿಧಾನಸಭೆಯನ್ನು ಮುಟ್ಟಲಿಕ್ಕೇ ಸಾಧ್ಯವಿಲ್ಲ. ಈ ಕಾಯಿದೆಯನ್ನು ಇವತ್ತು ಈ ಸರ್ಕಾರ ರಚನೆ ಮಾಡಿ ಇಲ್ಲಿಗೆ ತರುತ್ತಾ ಇಲ್ಲ. ಸನ್ಮಾನ್ಯ ರಮೇಶ್ ಕುಮಾರ್‌ರವರು 1994ರಿಂದ 1999ನೇ ಇಸವಿಯವರೆಗೆ ಇಲ್ಲಿ ಸ್ಪೀಕರ್ ಆಗಿದ್ದಂಥವರು. 1994ರಲ್ಲಿ ಎಸ್ಮಾ ಕಾಯಿದೆ ಚಾಲ್ತಿಗೆ ಬಂತು. ನನಗೆ ತಿಳಿದ ಮಟ್ಟಿಗೆ ಅದರ ಅವಧಿ 1994 ರಿಂದ 10 ವರ್ಷಗಳ ಕಾಲ. ಅಂದರೆ, ಅದು

2004ಕ್ಕೆ ಮುಕ್ತಾಯವಾಗಿದೆ. 2004ಕ್ಕೆ ಅದು ಮುಕ್ತಾಯವಾದ ನಂತರ ಮತ್ತೆ ಅದನ್ನು ತಿದ್ದುಪಡಿ ಮಾಡಿ ಇಲ್ಲಿಗೆ ತರಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ತಂದಿಲ್ಲ. ಇವತ್ತು ಈ ಕಾಯಿದೆಯನ್ನು ತಂದಾಗ, ಇವರು ಈ ರಾಜ್ಯದ ಜನತೆಯ ಪ್ರಜಾಪ್ರಭುತ್ವವನ್ನು ಹತ್ತಿಕ್ಕಲು ಹೊರಟಿದ್ದಾರೆ ಎನ್ನುವ ಭಾವನೆಯನ್ನು ನನ್ನ ಸ್ನೇಹಿತರು ಏನು ಹೇಳುತ್ತಿದ್ದಾರೆ, ಇದರ ಬಗ್ಗೆ ಅವರು ತಮ್ಮ ಆತ್ಮ ಶೋಧನೆಯನ್ನು, ಆತ್ಮ ಸಂವೇದನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಪೊಲೀಸರ ಬಗ್ಗೆ ಎಲ್ಲರೂ ಕೆಟ್ಟದಾಗಿ ಮಾತನಾಡುತ್ತಾರೆ. ನಾನೂ ಸಹ ಪೊಲೀಸ್ ಇಲಾಖೆಯಲ್ಲಿ ಒಬ್ಬ ಅಧಿಕಾರಿಯಾಗಿದ್ದಂಥವನು. ಅಲ್ಲಿ ನಾನು 22 ವರ್ಷಗಳ ಕಾಲ ಸೇವೆ ಮಾಡಿದ್ದೇನೆ. ಎಲ್ಲರೂ ಪೊಲೀಸರ ಬಗ್ಗೆ ಇಷ್ಟು ತುಚ್ಛವಾಗಿ ಮಾತನಾಡುತ್ತಾರಲ್ಲಾ, ಇವತ್ತು ಪೊಲೀಸರ ಸ್ಥಿತಿ ಹೇಗಿದೆ ಎಂಬುದು ಗೊತ್ತೇ. ಪೊಲೀಸ್ ಇಲಾಖೆಯ ಅಧಿಕಾರಿಗಳಾಗಲೀ, ಕಾನ್ಸ್‌ಟೇಬಲ್‌ಗಳಾಗಲೀ, ಅವರು ತಮ್ಮ ಹೆಂಡತಿ ಮಕ್ಕಳ ಮುಖವನ್ನು ನೋಡುವುದೂ ಬಹಳ ಕಷ್ಟವಿದೆ. ಅವರ ಮಕ್ಕಳು ಅವರನ್ನು ಕೆಲವು ಕಡೆ ಸಂಡೆ ಫಾದರ್ ಎಂದು ಕರೆಯುತ್ತಿದ್ದರು. ಏಕೆಂದರೆ, ಭಾನುವಾರ ಒಂದು ದಿವಸ ಅವರಿಗೆ ವೀಕ್ಲಿ ಆಫ್ ಸಿಕ್ಕಿದಾಗಷ್ಟೇ ಅವರು ತಮ್ಮ ಮಕ್ಕಳ ಮುಖವನ್ನು ನೋಡುತ್ತಿದ್ದರು. ಏಕೆಂದರೆ, ಬೆಳಗ್ಗೆ ಎದ್ದು ಪೊಲೀಸರು ಕೆಲಸಕ್ಕೆ ಹೋಗುವಷ್ಟರಲ್ಲಿ. ಮಕ್ಕಳು ಎದ್ದಿರುವುದಿಲ್ಲ, ರಾತ್ರಿ ಅವರು ಬರುವಷ್ಟರಲ್ಲಿ ಮಲಗಿರುತ್ತಾರೆ. ಇಂಥ ಕಷ್ಟದ ಪರಿಸ್ಥಿತಿಯಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಎಲ್ಲಾ ಸ್ನೇಹಿತರು ಕೆಲಸ ಮಾಡುತ್ತಿರುವಾಗ, ಎಲ್ಲರೂ ಪೊಲೀಸರ ಬಗ್ಗೆಯೇ ಮಾತನಾಡುತ್ತಾರೆ. ಉಳಿದ ಇಲಾಖೆಗಳವರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಆದರೆ ಪೊಲೀಸರ ಬಗ್ಗೆ ಮಾತ್ರ ಏಕೆ ಇಷ್ಟೊಂದು ಓಪನ್ ಆಗಿ, ಇಷ್ಟು ತುಚ್ಛವಾಗಿ ಮಾತನಾಡುತ್ತಾರೆ. ಅವರೆಲ್ಲರ ಹತ್ತಿರ ನನ್ನ ಒಂದು ನಿವೇದನೆ ಎಂದರೆ, ಪೊಲೀಸರ ಬಗ್ಗೆ ಸ್ವಲ್ಪ ಗೌರವವಿರಲಿ, ಪೊಲೀಸರ ಬಗ್ಗೆ ಸ್ವಲ್ಪವಾದರೂ ಗೌರವವಿಟ್ಟುಕೊಟ್ಟು ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಪೊಲೀಸರ ಬಗ್ಗೆ ಯಾರು ಮಾತನಾಡಿದರು? ರೆಕಾರ್ಡ್ ತೆಗೆಸಿ ಸ್ವಾಮಿ, ಅವರ ಬಗ್ಗೆ ಯಾರು ಹಾಗೆ ಮಾತನಾಡಿದರು? ನಾವ್ಯಾರೂ ಪೊಲೀಸರ ಸುದ್ಧಿಯನ್ನೇ ತೆಗೆಯಲಿಲ್ಲ.

ಶ್ರೀ ಬಿ.ಸಿ. ಪಾಟೀಲ್: ಈಗ ನೀವೇ ಹೇಳಿದಿರಲ್ಲಾ. ಮಾನ್ಯ ರಾಜೇಂದ್ರನ್‌ರವರು ಮಾತನಾಡುತ್ತಾ ಪೊಲೀಸರ ಬಗ್ಗೆ ಹೇಳಿದರು. ಅವರು ಅಷ್ಟು ದಂಡ ಹಾಕುತ್ತಾರೆ, ಇಷ್ಟು ದಂಡ ಹಾಕುತ್ತಾರೆ, ಹೆಂಡತಿ ಮಕ್ಕಳನ್ನು

ಕರೆದುಕೊಂಡು ಹೋಗಬೇಕು ಎಂದು ಹೇಳಿದರು. ನೀವೇಕೆ ಅಂಥ ಅಪರಾಧಗಳನ್ನು ಮಾಡುತ್ತೀರಿ? ಪೊಲೀಸರು ಕೇಳುವಂಥ ತಪ್ಪುಗಳನ್ನು ನೀವೇಕೆ ಮಾಡುತ್ತೀರಿ? ನೀವು ತಪ್ಪನ್ನು ಮಾಡಿದಾಗ ತಾನೇ ಪೊಲೀಸರು ಕೇಳುವುದು? ಕೇಳಿದಾಗ ಅವರಿಗೆ ಲಂಚ ಕೊಡುವವರು ನೀವೇ? ಅವರನ್ನು ಅಪರಾಧಿಗಳನ್ನಾಗಿ ಮಾಡುವಂಥವರೂ ನೀವೇ? ಕೆಟ್ಟದಾಗಿ ಮಾತನಾಡುವವರೂ ನೀವೇ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಪೊಲೀಸರು ವಿತೌಟ್ ವಾರೆಂಟ್ ಅರೆಸ್ಟ್ ಮಾಡಬಹುದು ಎಂದು ಬಿಲ್‌ನಲ್ಲಿ ಬಂದಿದೆ. ವಿತೌಟ್ ವಾರೆಂಟ್ ಅರೆಸ್ಟ್ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟರೆ ಏನಾಗುತ್ತದೆ ಎಂದು ಎಕ್ಸ್‌ಪ್ಲೈನ್ ಮಾಡಿದೆವು. ಪೊಲೀಸಿನವರು ಕೆಟ್ಟವರು, ಅವರು ಸರಿಯಿಲ್ಲ ಎಂದು ನಾನು ಹೇಳಲಿಲ್ಲ. ಪೊಲೀಸಿನವರು ಏನು ಕೆಲಸ ಮಾಡುತ್ತಿದ್ದಾರೆ ಲೈಸೆನ್ಸ್ ಇಲ್ಲದೇ ಗಾಡಿ ಓಡಿಸುತ್ತಿದ್ದರೆ, ಅವರು ನಿಲ್ಲಿಸಿ ಅಂದರೆ, ಅದನ್ನು ಸ್ಪೀಡ್ ಎಂದು ಬರೆದರೆ ಅದನ್ನು ರೋಡಿನಲ್ಲಿ ಯಾರಾದರೂ ಎಕ್ಸ್‌ಪ್ಲೈನ್ ಮಾಡಲು ಆಗುತ್ತದೆಯೇ? ಇಲ್ಲ, ಸ್ಪೀಡ್ ಆಗಿ ಬಂದಿಲ್ಲ ಎಂದು ನಾನು ಹೇಳಿದರೂ, ಅವರು ನೀನು ಸ್ಪೀಡ್ ಆಗಿ ಬಂದೆ ಎಂದರೆ what is the evidence for that?

ಅದಕ್ಕೋಸ್ಕರವಾಗಿ ನಾನು ಉದಾಹರಣೆಗಾಗಿ ಪೊಲೀಸರನ್ನು ಕೋಟ್ ಮಾಡಿದೆ. ಇವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದಕ್ಕೋಸ್ಕರ ಪೊಲೀಸನವರೆಲ್ಲಾ ದೇವರು, ಈ ದೇಶದಲ್ಲಿ ಪೊಲೀಸಿನವರೆಲ್ಲಾ ಮಹಾಪವಿತ್ರರು ಎಂದು ಹೇಳಬೇಕೇ? ಹೇಗೆ ಅದು? ನಾಳೆಯ ದಿವಸ ನಾನು ಸ್ವೀಪರ್ ಕೆಲಸ ಮಾಡಿಬಿಟ್ಟು ಬಂದು, ಸ್ವೀಪರ್‌ಗಳೆಲ್ಲಾ ದೇವರು ಸ್ವಾಮೀ ಎಂದು ಹೇಳಲಾಗುತ್ತದೆಯೇ? ಇಂಡಿಯನ್ ಏರ್‌ಲೈನ್ಸ್‌ನಲ್ಲಿ ನಾನು ಕೆಲಸ ಮಾಡಿ ಬಂದು, ನಾನು ಟ್ರಾಫಿಕ್ ಸೂಪರಿಂಟೆಂಡೆಂಟ್, ಅಲ್ಲಿ ಕೆಲಸ ಮಾಡುವವರೆಲ್ಲಾ ಮಹಾನುಭಾವರು, ಅಪಾರ ಪವಿತ್ರವಾದವರು ಎಂದು ಹೇಳುವುದಕ್ಕಾಗುತ್ತದೆಯೇ? ಯಾವ ಡಿಪಾರ್ಟ್‌ಮೆಂಟ್ ಆದರೂ ಸರಿ, when I am quoting an example, it is only an example. It is not identifying them.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ಒಂದು ಇಲಾಖೆಯ ಗೌರವದ ಬಗ್ಗೆ ನಾನು ಹೇಳುತ್ತಿದ್ದೇನೆ. ಪೊಲೀಸರು ದೇವರು ಎಂದು ನಾನು ಹೇಳಲಿಲ್ಲ. ಪೊಲೀಸರ ಕಷ್ಟದ ಬಗ್ಗೆ ಹೇಳಿದೆ. ಪೊಲೀಸಿನವರು

ಅರೆಸ್ಟ್ ಮಾಡುತ್ತಾರೆ ಎಂದು ಹೇಳಿ, ಯಾರೇ ಆಗಲಿ, for any cognizable offence, they are entitled to arrest.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೇ, ಬಿಲ್‌ಗೂ ಇದಕ್ಕೂ ಏನು ಸಂಬಂಧ? ಈಗ ಇಲ್ಲಿ ಬಿಲ್ ಬಗ್ಗೆ ಚರ್ಚೆಯಾಗುತ್ತಿದೆ. ಇದಕ್ಕೂ ಅದಕ್ಕೂ ಏನು ಸಂಬಂಧ? ಪಾಟೀಲ್ ಸಾಹೇಬರೇ, ಬಿಲ್ ಬಗ್ಗೆ ಚರ್ಚೆ ಮಾಡಿ. ಬಿಲ್‌ನಲ್ಲಿ ಅದನ್ನು ತರಬೇಕೇ ಬೇಡವೇ ಎನ್ನುವುದನ್ನು ಹೇಳಿ ಸಾಕು.

ಶ್ರೀ ಹೆಚ್.ಆಂಜನೇಯ (ಭರಮಸಾಗರ): ಮಾನ್ಯ ಅಧ್ಯಕ್ಷರೆ, ಇವತ್ತು ಸದನವನ್ನೇ ನಡೆಸಬಾರದಿತ್ತು. ಇವತ್ತು ಬಾಬು ಜಗಜೀವನ್‌ರಾಂರವರ ಜಯಂತಿಯನ್ನು ಸರ್ಕಾರದ ವೆಚ್ಚದಲ್ಲಿ ಇಡೀ ರಾಜ್ಯಾದ್ಯಂತ ಮಾಡುತ್ತಿದ್ದೇವೆ. ಇವತ್ತು ಎಲ್ಲಾ ಕಡೆ ಪ್ರತಿಭಟನೆ ಆಗಿದೆ. ಇಲ್ಲಿ ಕೂಡ ಸಂಜೆ 4–30 ಗಂಟೆಗೆ ಕಾರ್ಯಕ್ರಮವಿತ್ತು. ತಾವು ಸದನವನ್ನು ಇನ್ನೂ ನಡೆಸುತ್ತಿದ್ದೀರಿ. ದಯವಿಟ್ಟು ಸದನವನ್ನು ಈಗ ಮುಂದೂಡಬೇಕು. ಬಾಬು ಜಗಜೀವನ್‌ರಾಂರವರ ಜನ್ಮದಿನವನ್ನು ಆಚರಣೆ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇದಕ್ಕೆ ಅನುಮತಿ ನೀಡಬೇಕು. ದಯಮಾಡಿ ಅವರನ್ನು ಕಾರ್ಯಕ್ರಮಕ್ಕೆ ಕಳುಹಿಸಿಕೊಡಬೇಕು.

ಅಧ್ಯಕ್ಷರು: ಆಯಿತು. ಈಗ ಬಾಬು ಜಗಜೀವನ್ ರಾಂರವರ ಜಯಂತಿ ಕಾರ್ಯಕ್ರಮವಿದೆ. ಅನಿಲ್ ಕುಂಬ್ಳೆಯವರಿಗೆ ಸನ್ಮಾನ ಮಾಡುವ ಕಾರ್ಯಕ್ರಮವಿದೆ. ಆ ಕಾರಣದಿಂದ ಸದನವನ್ನು ಮುಂದೂಡಿ....

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಸದನವನ್ನು one hour adjourn ಮಾಡಿ. ನಾವೆಲ್ಲರೂ attend ಆಗಿ ಮತ್ತೆ ಬಂದು statement ಕೇಳೋಣ. ಇಲ್ಲದಿದ್ದರೆ 4 ಮಂದಿ ಹೋಗುವುದು, 4 ಮಂದಿ ಇಲ್ಲಿ ಕುಳಿತುಕೊಂಡಿರುವುದು ಇದು ಸರಿಯಾಗುವುದಿಲ್ಲ. ಬೇಕಾದರೆ one hour adjourn ಮಾಡಿ. ಇಲ್ಲಿಗೆ ಬಂದ ಮೇಲೆ one hour late ಆದರೂ ಪರವಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಸದನವನ್ನು adjourn ಮಾಡುವುದಾದರೆ, ನಾಳೆಗೆ adjourn ಮಾಡಿ. ಈಗ ಸದನವನ್ನು ಮುಂದೂಡಿ one hour ಆದಮೇಲೆ ಯಾರೂ ಬರುವುದಿಲ್ಲ, ಬರುವುದಕ್ಕೂ ಆಗುವುದಿಲ್ಲ. ದಯವಿಟ್ಟು ಈಗ adjourn ಮಾಡುವುದಾದರೆ ಅದನ್ನು ನಾಳೆಗೆ adjourn ಮಾಡಿ. ಈಗ 5 ಗಂಟೆ ಎಂದರೆ programme 6 ಗಂಟೆಗೆ ಆಗುತ್ತದೆ. Minimum one hour ಆಗುತ್ತದೆ. ಅದಲ್ಲದೆ one hour ಸಾಕಾಗುವುದಿಲ್ಲ.

ದಯವಿಟ್ಟು ನಾಳೆಗೆ adjourn ಮಾಡಿ. Bill ಸಹ ಇದೆ. ನಾಳೆಗೆ continue ಮಾಡೋಣ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಅವರೆಲ್ಲರ ಸಲಹೆಗಳಿಗೆ ಏನು ಹೇಳುತ್ತೀರಿ? ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಸದಸ್ಯರು ಏನು ಹೇಳುತ್ತಾರೆಂದರೆ, ಈ ಕಾರ್ಯಕ್ರಮಕ್ಕೆ ಹೋದ ಮೇಲೆ ಒಂದರಿಂದ ಒಂದೂವರೆ ಗಂಟೆ ಕಳೆದುಹೋಗುತ್ತದೆ. ನಂತರ ಸದನ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾಳೆ ಒಂದು ದಿವಸ ಸದನವನ್ನು ಮುಂದುವರಿಸಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ಸರ್ಕಾರದ ಅಭಿಪ್ರಾಯವೇನೆಂದು ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಸರ್, one hour ನಲ್ಲಿ programme ಮುಗಿಯುವುದಿಲ್ಲ. ಹೇಳುವುದನ್ನು ದಯಮಾಡಿ ಕೇಳಿ. ಅರ್ಥಮಾಡಿಕೊಳ್ಳಿ. ಏಕೆ urgent ಮಾಡುತ್ತೀರಿ? One hour ನಲ್ಲಿ ಬಾಬು ಜಗಜೀವನ್‌ರಾಂರವರ programme ಅನ್ನು ಮುಗಿಸುವುದಕ್ಕಾಗುವುದಿಲ್ಲ. Minimum two hours ಬೇಕು. ಅದಲ್ಲದೆ ಅನಿಲ್ ಕುಂಬ್ಳೆಯವರಿಗೆ ಸನ್ಮಾನ್ಯ ಕಾರ್ಯಕ್ರಮವಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಸದನವನ್ನು ಇನ್ನೊಂದು ದಿವಸಕ್ಕೆ ಮುಂದುವರಿಸಬೇಕೆಂದು ಸದನದ ಎಲ್ಲಾ ಸದಸ್ಯರುಗಳಲ್ಲಿ ಆ ಭಾವನೆ ಇದ್ದರೆ ನಾಳೆಗೆ ಸದನವನ್ನು ಮುಂದುವರಿಸುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಸಹಕಾರ ಕೊಡಲಿಕ್ಕೆ ಸಿದ್ಧವಿದ್ದೇವೆ.

ಅಧ್ಯಕ್ಷರು: ಆಯಿತು. ಹಾಗಾದರೆ ಈ ಬಿಲ್ ಬಗ್ಗೆ ಐದು ನಿಮಿಷ ಉತ್ತರ ಹೇಳುತ್ತಾರೆ. ಅದಾದ ಮೇಲೆ ನಾಳೆಗೆ adjourn ಮಾಡೋಣ. ಉಳಿದ ಎಲ್ಲವನ್ನೂ ನಾಳೆ ತೆಗೆದುಕೊಳ್ಳೋಣ. ಬೇರೆ ದಾರಿ ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ದಯವಿಟ್ಟು ಎಲ್ಲಾ ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಬಗ್ಗೆ ಸನ್ಮಾನ್ಯ ಎಲ್ಲಾ ಸದಸ್ಯರುಗಳ ಭಾವನೆಗಳೇನಿವೆ, ಅವರು ಏನು ಸರ್ಕಾರದ ಗಮನಕ್ಕೆ ತಂದಿದ್ದಾರೆ, ಈ ವಿಧೇಯಕವನ್ನು ನಾವು ಇವತ್ತು ಹೊಸದಾಗಿ ಮಂಡನೆ ಮಾಡುತ್ತಿರತಕ್ಕಂಥದ್ದು ಅಲ್ಲ. ಇದನ್ನು ಪ್ರತಿ ಹತ್ತು ವರ್ಷಕ್ಕೊಂದು ಬಾರಿ revive ಮಾಡತಕ್ಕಂಥದ್ದಕ್ಕೆ ಏನು ಸದನದ ಮುಂದೆ ತರುತ್ತಿದ್ದೇವೆ, 1994 ರಿಂದ 2004ನೇ ಇಸವಿವರೆಗೆ ಈ ವಿಧೇಯಕ ಏನಿತ್ತು, ಈ ವಿಧೇಯಕವನ್ನು revive ಮಾಡತಕ್ಕಂಥದ್ದಕ್ಕೆ ಇವತ್ತು ತಂದಿರತಕ್ಕಂಥ

ಉದ್ದೇಶವಾಗಿದೆ. ಆದ್ದರಿಂದ ಇದು ಹೊಸದಾಗಿ ಮಂಡನೆ ಮಾಡುತ್ತಿರತಕ್ಕಂಥದ್ದಲ್ಲ ಎಂದು ಈ ಸದನದ ಗಮನಕ್ಕೆ ನಾನು ತರಲಿಕ್ಕೆ ಬಯಸುತ್ತೇನೆ. ಹಾಗೂ ಈ ವಿಧೇಯಕದ ಬಗ್ಗೆ ಇವತ್ತು ಏನು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ, ಈ ವಿಧೇಯಕ ಹಲವಾರು ವರ್ಷಗಳಿಂದ ಇದ್ದರೂ, ಯಾವುದೇ ರೀತಿಯ ತಾವು ಕೆಲವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವತ್ತು ಹೋರಾಟ ಮಾಡತಕ್ಕಂಥದ್ದು, ಪ್ರತಿಭಟನೆ ವ್ಯಕ್ತಪಡಿಸತಕ್ಕಂಥ ಹಕ್ಕು ಏನಿದೆ, ಆ ಹಕ್ಕನ್ನು ಮೊಟಕುಗೊಳಸಲಿಕ್ಕೆ ಹೊಸದಾಗಿ ತರುತ್ತಿರತಕ್ಕಂಥ ವಿಧೇಯಕ ಇದಲ್ಲ. ಈಗ ಈ revival ಮಾಡಲಿಕ್ಕೆ ತಂದಿರತಕ್ಕಂಥದ್ದು. ಆ ದೃಷ್ಟಿಯಿಂದ ತಂದಿದ್ದೇವೆಯೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಏನಾದರೂ ಸಾರ್ವಜನಿಕರಿಗೆ ಅನಾನುಕೂಲ ಅಗತಕ್ಕಂಥ ಸಂದರ್ಭದಲ್ಲಿ ಇವತ್ತು ಕೆಲವು ಕಾನೂನುಗಳನ್ನು ತರಬೇಕಾಗಿದೆ. ಆ ದೃಷ್ಟಿಯಿಂದ ತಂದಿರತಕ್ಕಂಥದ್ದು. ಹೊಸದಾಗಿ ನಾನು ಮಂಡನೆ ಮಾಡುತ್ತಿರತಕ್ಕಂಥದ್ದಲ್ಲ ಎನ್ನುವುದನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ Bill 1994 ರಿಂದ 2004ರ ವರೆಗೆ ಇತ್ತು. ಅದನ್ನು ಮತ್ತೆ 2004ರಿಂದ revive ಮಾಡಿಲ್ಲ. ಅದಕ್ಕೋಸ್ಕರ ನಾವು revive ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾವೀಗ 2006ನೇ ಇಸವಿಯಲ್ಲಿದ್ದೇವೆ. ಈ ಎರಡು ವರ್ಷಗಳಲ್ಲಿ ಈ Bill ಇಲ್ಲದಿರುವಾಗ ಈ ರಾಜ್ಯದಲ್ಲಿ ಏನೂ ಅನಾಹುತವಾಗಲಿಲ್ಲವಲ್ಲಾ ಈ ರಾಜ್ಯದಲ್ಲಿ ಏನೂ ಅನಾಹುತವಾಗಲಿಲ್ಲ. .... ಆದ್ದರಿಂದ, ಸಂವಿಧಾನದ Article 13 Part 2 ಅನ್ನು ಸ್ವಲ್ಪ ಗಮನದಲ್ಲಿಟ್ಟು ನೋಡಬೇಕು. ಇದರಲ್ಲಿ ಏನು ಹೇಳುತ್ತದೆಂದರೆ – The state shall not make any law which takes away or abridges the rights conferred by this Part and any law made in contravention of this clause shall, to the extent of the contravention, be void. 'Article 13 of the Constitution. The state shall not make any law which takes away or abridges the rights conferred by this Part'. ಇಂಥ ಪರಿಸ್ಥಿತಿ ಸಂವಿಧಾನದಲ್ಲಿರುವಾಗ ನಾವಿಲ್ಲಿ 1994ರಲ್ಲಿ ಇತ್ತು ಎಂದು ಹೇಳಿದರೆ, 1994ರಲ್ಲಿ ಇದ್ದರೂ ಇದರ ಪ್ರಕಾರ ತಪ್ಪು. ಈಗ ನೀವು revive ಮಾಡಿದರೂ ತಪ್ಪು, ಯಾವಾಗ ಇದ್ದರೂ ತಪ್ಪು. Constitution ನ 7th Schedule ನಲ್ಲಿ ಯಾವುದು

essential service ಅಂತ ಇದೆ ಎಂದು ಹೇಳತಕ್ಕಂಥದ್ದನ್ನು Constitution ನಲ್ಲಿ define ಮಾಡಿದ್ದಾರೆ. ಮತ್ತೆ ಸರ್ಕಾರಕ್ಕೆ ಇನ್ನೊಂದು ಅಧಿಕಾರ ಕೊಟ್ಟಿದ್ದಾರೆ. Time to time ಯಾವುದಾದರೂ ಒಂದು ವಿಚಾರವನ್ನು ಯಾವುದಾದರೂ ಒಂದು ವಿಭಾಗವನ್ನು Essential Commodities Act ಕೆಳಗಡೆ Services ಕೆಳಗಡೆಗೆ temporary ಆಗಿ ತರಬಹುದು. That too, not more than six months. ಇದು ನಿಮಗೆ provision ಇದೆ. If the Government feels something necessary, anyone can brought under the Essential Services Act for the period of six months. ಅದು ನಿಮಗೆ 7th Schedule ನಲ್ಲಿ provision ಕೊಟ್ಟಿದ್ದಾರೆ. ಅದನ್ನು ಬಿಟ್ಟು ಇನ್ನೊಂದು ಕಾನೂನನ್ನು ಮಾಡಲಿಕ್ಕೆ Constitution ನಲ್ಲಿ ನಿಮಗೆ ಅವಕಾಶ ಕೊಟ್ಟಿಲ್ಲ. 1994 ರಿಂದ 2004ರ ವರೆಗೆ ಇದ್ದದ್ದು ಇದು ಸಂವಿಧಾನಕ್ಕೆ ವಿರೋಧ. ಮೂಲಭೂತ ಹಕ್ಕುಗಳಿಗೆ ವಿರೋಧ. ಯಾವುದೇ ರೀತಿಯಾಗಿ ಪ್ರಜಾಪ್ರಭುತ್ವದಲ್ಲಿ ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು ಇರತಕ್ಕಂಥ ಅವಶ್ಯಕತೆ ಏನಿತ್ತು? What is the immediate necessity? Immediate provocation ಏನಿದೆ? ಆಯಿತು, ನೀವು revive ಮಾಡಬೇಕೆಂದ್ದೀರಿ. What is the immediate provocation, demand to revive this Bill? ಎರಡು ವರ್ಷ ಇಲ್ಲದಿರುವಾಗ ಏನಾಗಿತ್ತು? ಈಗ urgency ಏನಾಗಿದೆ? What is the situation arised now? ಏನಾದರೂ ಅಂಥ situation ಬಂದಿದೆಯೇ? ಬಂದಿದ್ದರೆ let us discuss. ಆ ರೀತಿ ಬಂದಾಗ ನಿಮಗೆ ಅವಕಾಶವಿದೆ. ಹೇಗೆಂದರೆ, 6 ತಿಂಗಳವರೆಗೆ Essential Services Act ಕೆಳಗಡೆಗೆ ಬರಬಹುದೆನ್ನತಕ್ಕಂಥದ್ದು ತಮಗೆ ಅವಕಾಶವಿದೆ. If that situation arises. Now, that sort of any situation has not arised. Without any provocation, without any demand what is the necessity to revive this Act? ದಯವಿಟ್ಟು ಸರ್ಕಾರ ಇದನ್ನು ಆಲೋಚನೆ ಮಾಡಬೇಕು. ಏಕೆಂದರೆ ನಮ್ಮ ಅನುಭವದಲ್ಲಿ ನಮ್ಮ ದೇಶದಲ್ಲಿ ಕಾನೂನುಗಳೆಲ್ಲಾ ಚೆನ್ನಾಗಿಯೇ ಇದೆ. ಆದರೆ ಈ ದೇಶದಲ್ಲಿ ಕಾನೂನುಗಳನ್ನು ದುರುಪಯೋಗ ಮಾಡಿಕೊಳ್ಳುವುದನ್ನು ನಾವು ಹೆಚ್ಚು ನೋಡುತ್ತಿದ್ದೇವೆ. ಕಾನೂನುಗಳನ್ನು ಸದುಪಯೋಗ ಮಾಡಿಕೊಳ್ಳತಕ್ಕಂಥದ್ದನ್ನು ನಾವು ಹೆಚ್ಚು ನೊಡುತ್ತಿಲ್ಲ. ಕಾನೂನನ್ನು ಯಾವಾಗಲೂ ನಾವು negative ಆಗಿ ನೋಡುತ್ತಿದ್ದೇವೆಯೇ ಹೊರತು positive ಆಗಿ ಕಾನೂನನ್ನು

ಉಪಯೋಗಿಸಿತಕ್ಕಂಥದ್ದನ್ನು ಈ ದೇಶದಲ್ಲಿ ನಾವು ನೋಡುತ್ತಿಲ್ಲ. ನೀವು ಒಂದು ಸಲ provision ಮಾಡಿದರೆ discretionary ಆಗಿಬಿಡುತ್ತದೆ ಅವರಿಗೆ. The moment if you made a law, discretionary authority ಆಗಿಬಿಡುತ್ತದೆ ಅವರಿಗೆ. ಆವಾಗ we have to live under the mercy of those officers. ಅವರ ದಯೆ ಕೆಳಗಡೆ ನಾವು ಬದುಕಬೇಕಾಗುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಬಿದ್ದ ಹಾಗೆ ಆಗುತ್ತದೆ. ದಯವಿಟ್ಟು ಅರ್ಥಮಾಡಿಕೊಳ್ಳಿ. ಇವತ್ತು ಯಾವುದೇ ದುರುದ್ದೇಶ ಇಲ್ಲದಿದ್ದರೆ ನಿಮಗೆ ಅಂಥ ಅವಶ್ಯಕತೆ ಏನು ಬಿದ್ದಿದೆ ಅದನ್ನಾದರೂ ಹೇಳಿ. What is the necessity? Immediate provocation ಏನಿದೆ? ಅದನ್ನಾದರೂ ಹೇಳಿ.

ಶ್ರೀ ಎ.ಕೃಷ್ಣಪ್ಪ (ವರ್ತೂರು): ಮಾನ್ಯ ಅಧ್ಯಕ್ಷರೆ, Schedules ನಲ್ಲಿ ಕೊಟ್ಟಿರುವ ಪ್ರಕಾರ ನಡೆಯಬಾರದಂಥ ಘಟನೆಗಳೇನಾದರೂ ರಾಜ್ಯದಲ್ಲಿ ನಡೆದರೆ, ಉದಾಹರಣೆಗೆ, ರಾಜಸ್ಥಾನದಲ್ಲಿ 8 ತಿಂಗಳಿಗೂ ಹೆಚ್ಚು workers' strike ಆಯಿತು. ತಮಿಳುನಾಡಿನಲ್ಲಿ strike ಆಯಿತು. ಏಕ್‌ದಂ ಶ್ರೀಮತಿ ಜಯಲಲಿತಾರವರು ಆವತ್ತು ಯಾವ ರೀತಿ ಕಾನೂನುಗಳನ್ನು ಅನುಸರಿಸಿದರು, ಎಷ್ಟು ಲಕ್ಷ ಜನರನ್ನು dismiss ಮಾಡಿದರು, ಈಗ ಅದು reverse ಹೇಗೆ ಆಗಿ implementation ಮಾಡಿಸಿದ್ದಾರೆ ಎಂದು ಶ್ರೀಮಾನ್ ಕುಮಾರಸ್ವಾಮಿಯವರು ನಮ್ಮ ಮುಖ್ಯಮಂತ್ರಿಗಳಿಗೆ ಅನುಭವ ಆಗಿರಬಹುದು. ಅಂಥ ಪರಿಸ್ಥಿತಿಯೂ ಕೂಡ ಇಲ್ಲ. ಜೊತೆಗೆ ಇದರಲ್ಲಿ 16 ಇಲಾಖೆಗಳನ್ನು ಒಟ್ಟಾಗಿ ಸೇರಿಸಿಬಿಟ್ಟಿದ್ದೀರಿ. Production, generation, storage, transmission, etc., ಕರ್ನಾಟಕ ರಾಜ್ಯದಲ್ಲಿ ಎಲ್ಲಿ ಏನಾಗಿದೆ? House ಗೆ ಇವರೊಂದು ಸಮಜಾಯಿಷಿ ಕೊಡಲಿ. ಏನೂ ಆಗದೇ ಇವರೇಕೆ ತರುತ್ತಿದ್ದಾರೆ? ಏಕೆ ರಿವೈವಲ್ ಮಾಡುತ್ತಿದ್ದಾರೆ? ಅಪಾಯಗಳಾಗಿದೆ, ಕೆಟ್ಟ ಅನುಭವಗಳಾಗಿದೆ, ಸಾರ್ವಜನಿಕರ ಬದುಕಿಗೆ ಸಂಕಷ್ಟಗಳು ಬಂದಿವೆ; ಇಂಥವು ಯಾವುದೂ ಇಲ್ಲದೇ ಈ ಒಂದು ಕಾನೂನನ್ನು ಜಾರಿ ಮಾಡುವುದು ಇದು ಸಹಿಸಿಕೊಳ್ಳುವಂಥದ್ದೂ ಅಲ್ಲ, ಒಪ್ಪಿಕೊಳ್ಳುವಂಥದ್ದು ಅಲ್ಲ, ಅವರಿಗೆ ಶೋಭೆ ತರುವಂಥದ್ದೂ ಅಲ್ಲ. ಅದಕ್ಕೆ, in absence of such experiences and explaination required on each department, there is no need for us to introduce this. ಅದನ್ನು ದಯಮಾಡಿ ದೊಡ್ಡ ಮನಸ್ಸು ಮಾಡಿ ವಾಪಸ್ಸು ತೆಗೆದುಕೊಳ್ಳಲಿ. ಬೇಕಾದರೆ ಐಟಂವಾರು ನಮ್ಮ ಎಲ್ಲಾ ನಾಯಕರುಗಳ ಹತ್ತಿರ ಡಿಬೇಟ್ ಮಾಡಲಿ.

ಸಮಜಾಯಿಷಿ ಕೊಡಲಿ. ಅಂಥ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ವಾರೆಂಟ್ ಆಗಿದೆ, ನೀರಿನ ಇಲಾಖೆಯಲ್ಲಾಗಿದೆ, ವಿದ್ಯುಚ್ಛಕ್ತಿ ಇಲಾಖೆಯಲ್ಲಾಗಿದೆ, ಆಮೇಲೆ essential production activities related to foodgrains, ಗೆ ಆಗಿದೆ, ಟೆಕ್ಸ್‌ಟೈಲ್ಸ್ ಇಂಡಸ್ಟ್ರೀಸ್‌ನಲ್ಲಾಗಿದೆ ಇವೆಲ್ಲವನ್ನೂ ಏನೂ ಹೇಳದೆ ಸುಮ್ಮನೆ ಇದನ್ನು ಸೇರಿಸಿ, ಜನರ ಮೇಲೆ ಹೇರುವಂಥದ್ದು ಇದು ಒಳ್ಳೆಯ ಲಕ್ಷಣಗಳಲ್ಲ. ಇದನ್ನು ಮಾಡಬಾರದು, ಇದನ್ನು ವಾಪಸ್ಸು ಪಡೆಯಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಪೊಲೀಸ್ ಸ್ಟೇಷನ್ಸ್‌ನಲ್ಲಿ ರೌಡಿ ಪೀಟರ್ಸ್ ಒಂದು ಲಿಸ್ಟ್ ಮೇನ್‌ಟೇನ್ ಮಾಡಿರುತ್ತಾರೆ. ಪಿಕ್ ಪಾಕೆಟರ್ಸ್, ಈವ್ ಟೀಜರ್ಸ್, ಬೂಟ್ ಲೆಗ್ಗರ್ಸ್ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಹೀಗೆ. ಎಲ್ಲಿ ಏನೇ ಒಂದು ಚೂರು ಪ್ರಕ್ಷುಬ್ಧವಾದಂಥ ವಾತಾವರಣ ಇದ್ದರೂ ಕೂಡ ಕಥೆ ಇಲ್ಲ, ಕಾರಣವಿಲ್ಲ, ಅವರನ್ನೆಲ್ಲಾ ತಂದು ಒಳಕ್ಕೆ ಹಾಕಿಕೊಂಡು ಬಿಡುತ್ತಾರೆ. ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡಬೇಕೆಂದು ಹೇಳುತ್ತಾರೆ. ನಮ್ಮ ಎಕ್ಸ್‌ಪ್ಲನೇಷನ್ ಈಗ ರಿವೈವಲ್ ಮಾಡುತ್ತಿದ್ದೇವೆ, ಜಾರಿಯಲ್ಲಿತ್ತು ಎಂದು ಹೇಳುವುದನ್ನು ನೋಡಿದರೆ, ಈ ಕಾರ್ಮಿಕ ವರ್ಗ ಯಾರಿದ್ದಾರೆ, ಈ ಸೆಕ್ಟಾರ್ಸ್‌ನಲ್ಲಿ ವರ್ಕ್ ಮಾಡತಕ್ಕಂಥವರು ಯಾರಿದ್ದಾರೆ, ಅವರ ಮೇಲೆ ನಮಗೆ ವಿಶ್ವಾಸವೇ ಇಲ್ಲ, ಒಂದು ರೀತಿಯ ನಿರಂತರವಾದಂಥ ಅನುಮಾನ. ಅವರ ನಡತೆ ಬಗ್ಗೆ ಅನುಮಾನ. ಅವರು ಯಾವತ್ತಾದರೂ ಹೀಗೆ ಮಾಡಬಹುದು ಏನೋ, ಮಾಡಿದಾಗ ಅವರ ಮೇಲೆ ಹತೋಟಿ ಇರಲೆಂದು ಹೇಳಿ ಉಪಯೋಗ ಇದನ್ನು ಮಾಡಿದ ಹಾಗಾಗುತ್ತದೆ. That is not a good thing. After all they are the working class. ಅವರ ದುಡಿಮೆಯ ಫಲದಿಂದ ನಾವು ಸುಖಪಡತಕ್ಕಂಥವರು. ಅವರನ್ನು ಈ ಅನುಮಾನದ ದೃಷ್ಟಿಯಿಂದ ನೋಡತಕ್ಕಂಥದ್ದು, it is not a good practice.

ಶ್ರೀ ಎಸ್. ಕುಮಾರ ಬಂಗಾರಪ್ಪ (ಸೊರಬ): ಮುಖ್ಯವಾಗಿ ಇಲ್ಲಿ ಡಿಸ್ಟ್ರಿಬ್ಯೂಷನ್ ಆಫ್ ವಾಟರ್ ಏನಿದೆ, ... connected with production, generation, storage, transmission, supply or distribution of water. I think we should stick on to water. ಅಂದರೆ, ನೀರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರಗಳನ್ನು ಇಲ್ಲಿ ಇಟ್ಟುಕೊಳ್ಳತಕ್ಕಂಥದ್ದು ಬಹಳ ಅವಶ್ಯಕತೆ ಇದೆ ಎಂಬುದು ನನ್ನ ಭಾವನೆ. ಏಕೆಂದರೆ, ಎಸೆನ್‌ಷಿಯಲ್ ಸರ್ವಿಸಸ್‌ನಲ್ಲಿ 10 ವರ್ಷಗಳ

ಹಿಂದೆ ಇದನ್ನು ಮಾಡಿದ್ದರು, ಅದನ್ನು ಮತ್ತೆ ಇವತ್ತು ನಾವು ರಿವೈವ್ ಮಾಡುತ್ತಿದ್ದೇವೆ ಎಂದು ಏನು ತಾವು ಹೇಳಿದಿರಿ, ಐ ಥಿಂಕ್, ಈಗಾಗಲೇ ನಮಗೆ ಬೋರ್‌ವೆಲ್ ಹೊಡೆಯತಕ್ಕಂಥ ವಿಚಾರದಲ್ಲಿರಬಹುದು, ಅಥವಾ ಕೆರೆ ವಿಚಾರದಲ್ಲಿರಬಹುದು, ನೀರು ಸಂಗ್ರಹಣೆ ಮಾಡತಕ್ಕಂಥ ವಿಚಾರದಲ್ಲಿರ ಬಹುದು, ಇವತ್ತು ಸ್ಟ್ರಿಂಜೆಂಟ್ ಆಗಿ ನಾವು ಕಾನೂನುಗಳನ್ನು ಮಾಡತಕ್ಕಂಥ ಅವಶ್ಯಕತೆಗಳೂ ಕೂಡ ಇವೆ. ಅಂದರೆ, ಅಂಡರ್ ವಾಟರ್ (ಅಂತರ್ಜಲ) ಸಮಸ್ಯೆಯೇನು ಇವತ್ತು ದಿನನಿತ್ಯ ಏಳುತ್ತಿದೆ, ಅದಕ್ಕೆ ಸೀಮಿತವಾಗಿ ಇವತ್ತೇನು ಕಾನೂನುಗಳಿವೆ, ಅದಕ್ಕೆ ನಾವು ಹೆಚ್ಚು ಒತ್ತನ್ನು ಕೊಡತಕ್ಕಂಥ ಅವಶ್ಯಕತೆಗಳಿವೆ. ಎಸೆನ್‌ಷಿಯಲ್ ಸರ್ವಿಸಸ್ ಎಂದು ಹೇಳಿ ಸಾರಾಸಗಟಾಗಿ ಇದರಲ್ಲಿ ಎಲ್ಲಾದನ್ನೂ ಸೇರಿಸತಕ್ಕಂಥದ್ದೇನಿದೆ, ಇದು ಎಲ್ಲಾ ವಿಚಾರಗಳಿಗೂ ಗೊಂದಲಕ್ಕೆ ಆಸ್ಪದ ಕೊಡುವಂಥ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ ಎಸೆನ್‌ಷಿಯಲ್ ಸರ್ವೀಸ್ ಇವತ್ತು ನೀರು ಎಲ್ಲವನ್ನೂ ಕೂಡ ಥರ್ಡ್ ವರ್ಲ್ಡ್ ವಾರ್ ನೀರಿನಿಂದಾಗುತ್ತದೆ ಎಂದೇನಿದೆ, ಅದಕ್ಕೆ ಸೀಮಿತವಾಗಿ ಇವತ್ತೇನು ಕಾನೂನುಗಳಿವೆ, ಅದಕ್ಕೆ ಎಸೆನ್‌ಷಿಯಲ್ ಸರ್ವೀಸಸ್ ಅನ್ನು ಏನಾದರೂ ಸ್ಟ್ರಿಂಜೆಂಟ್ ಆಗಿ ಮಾಡಬೇಕೆನ್ನುವುದಾದರೆ ನೀರು ಮತ್ತು ವಿದ್ಯುತ್ ಇದಕ್ಕೆ ಸೀಮಿತವಾಗಿ ಇರತಕ್ಕಂಥ ಕಾನೂನುಗಳನ್ನು ನಾವು ರಿಜೂವಿನೇಟ್ ಮಾಡತಕ್ಕಂಥ ಅವಶ್ಯಕತೆಗಳಿವೆ. ಇದು ಮುಖ್ಯವಾಗಿರುವುದು. ಈಗ ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಅಂದರೆ ನೀರಿಗೆ ಸಂಬಂಧಪಟ್ಟಿರತಕ್ಕಂಥ ನಮ್ಮ ಫಿಷರೀಸ್ ಡಿಪಾರ್ಟ್‌ಮೆಂಟ್ ಇರಬಹುದು ಅಥವಾ ಅಭಿವೃದ್ಧಿ ಮಾಡತಕ್ಕಂಥದ್ದಿರಬಹುದು ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಸಮಸ್ಯೆಗಳೂ ಕೂಡ ಬಹಳಷ್ಟಿವೆ. ಹಾಗಾಗಿ, ಮಾಡತಕ್ಕಂಥ ಕಾರಣಗಳು, ನಿರ್ದಿಷ್ಟವಾಗಿ ಇಂಥಿಂಥದ್ದನ್ನೇ ಎಂದು ಹೇಳಿಬಿಟ್ಟು, ಆಗ ಮಾಡದೇ ಇರಬಹುದು, ಈಗ ಅದನ್ನು ಮಾತಕ್ಕಂಥ ಅವಶ್ಯಕತೆಗಳು ಬಹಳ ಇವೆ ಎನ್ನುವುದನ್ನು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ: ಈಗ ತಾನೇ ಈ ಒಂದು ಬಿಲ್‌ನ ಬಗ್ಗೆ ಹಿರಿಯ ಸದಸ್ಯರು..

ಶ್ರೀ ಹೆಚ್. ಆಂಜನೇಯ: ಸಾಕು.

ಶ್ರೀ ಕೆ.ಜಿ. ಬೋಪಯ್ಯ: ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಆರ್ಟಿಕಲ್ 13 ಇನ್‌ಫ್ರಿಂಜ್‌ಮೆಂಟ್ ಆಗುತ್ತದೆ..

(ಗೊಂದಲ)

ಅಧ್ಯಕ್ಷರು: ನಾಳೆಯೇ ತೆಗೆದುಕೊಳ್ಳೋಣ. ಏಕೆಂದರೆ, ಅಲ್ಲಿ ಫಂಕ್ಷನ್‌ಗೆ ಲೇಟಾಗುತ್ತದೆ ಎನ್ನುತ್ತಾರೆ. ನಿಮ್ಮ ಅಭಿಪ್ರಾಯವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಈ ಒಂದು ವಿಧೇಯಕವನ್ನು ತರತಕ್ಕಂಥ ಉದ್ದೇಶ, ಏನು ಹಿಂದೆ ಸನ್ಮಾನ್ಯ ಧರ್ಮಸಿಂಗ್‌ರವರೇ ಮುಖ್ಯಮಂತ್ರಿಗಳಾಗಿದ್ದಾಗ ಮರಳು ಲಾರಿಯವರ ಒಂದು ಸ್ಟ್ರೈಕ್ ಪ್ರಾರಂಭವಾದಂಥ ಸಂದರ್ಭದಲ್ಲಿ ಆ ಭಾಗದಲ್ಲಿರತಕ್ಕಂಥ ಎಲ್ಲಾ ನಮ್ಮ ಹಿರಿಯ ಸದಸ್ಯರುಗಳೇ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿರತಕ್ಕಂಥದ್ದು. ಅದರ ಜೊತೆಗೆ, ಇದು 10 ವರ್ಷಗಳಿಗೊಂದು ಸಾರಿ ಏನು ನಾವು ರಿವೈವ್ ಮಾಡಿದರೂ, 10 ವರ್ಷಗಳಲ್ಲಿ ನಾವೇನು ಕಾನೂನು ತಂದಿದ್ದೆವು, ಈ ಕಾನೂನಿನಡಿಯಲ್ಲಿ ಯಾರೇ ಒಬ್ಬ ಇವತ್ತು ಅವರ ಹಕ್ಕನ್ನು ಪಡೆಯಲಿಕ್ಕೆ ಹೋರಾಟ ಮಾಡಿದಂಥ ಸಂದರ್ಭದಲ್ಲಿ ಯಾರಿಗೂ ಈ ಒಂದು ವಿಧೇಯಕದಿಂದ ಸರ್ಕಾರದಿಂದ ಇರಬಹುದು ಅಥವಾ ಈ ಒಂದು ವಿಧೇಯಕವನ್ನು ದುರುಪಯೋಗಪಡಿಸಿಕೊಂಡಂಥ ಘಟನೆಗಳು ಯಾವುದೂ ಇಲ್ಲದಿರುವುದರಿಂದ ಸನ್ಮಾನ್ಯ ಸದಸ್ಯರು ಇದರ ಬಗ್ಗೆ ಯಾವುದೇ ರೀತಿಯ ಒಂದು ಆತಂಕ ಪಡಬೇಕಾಗಿಲ್ಲ. ಇದು ಎಮರ್ಜೆನ್ಸಿ ಸಂದರ್ಭದಲ್ಲಿ ಉಪಯೋಗ ಮಾಡತಕ್ಕಂಥದ್ದಕ್ಕೇನಿದೆ, ಅದಕ್ಕೆ ದಯವಿಟ್ಟು ಸದನ ಒಪ್ಪಿಗೆಯನ್ನು ಕೊಡಬೇಕೆಂದು ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಈಗ ಪರ್ಯಾಲೋಚನೆ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿ: ಇದನ್ನು ವಿರೋಧ ಮಾಡಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಶ್ರೀ ಜಿ.ವಿ. ಶ್ರೀರಾಮ್‌ರೆಡ್ಡಿಯವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"2005ರ ಕರ್ನಾಟಕ ಆತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 10ರವರೆಗೆ ಎರಡೂ ಸೇರಿದಂತೆ

ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು : "ಖಂಡ 2 ರಿಂದ 10ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಖಂಡ 2 ರಿಂದ 10ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ...

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2005ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

ಶ್ರೀ ಆರ್.ವಿ. ದೇಶಪಾಂಡೆ: ಹೌದು ಎಂದು ಯಾರೂ ಹೇಳಲಿಲ್ಲ. ಏಕೆ ಗಲಾಟೆ. ಹೌದು ಎಂದು ನೀವು ಹೇಳಬೇಕು.

ಅಧ್ಯಕ್ಷರು: ಈಗ ಜಗಜೀವನ್‌ರಾಂ ರವರ ಫಂಕ್ಷನ್ ಇದೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ರಿಟನ್ ಆನ್ಸರ್ಸ್‌ಗಳನ್ನು ಅದನ್ನು ಟೇಬಲ್ ಮಾಡಿದರೆ ಅಟ್‌ಲೀಸ್ಟ್ ಲ್ಯಾಪ್ಸ್ ಆಗುವುದಿಲ್ಲ.

ಅಧ್ಯಕ್ಷರು: ನಾಳೆ ನೋಡೋಣ. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 19 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 6ನೇ ಏಪ್ರಿಲ್ 2006ರ ಗುರುವಾರದಂದು ಬೆಳಗ್ಗೆ 10ಗಂಟೆಗೆ ಸೇರಲು ನಿಶ್ಚಯಿಸಿತು)